

# ಕ್ರಾಂತಿ ಗಂಗೋತ್ರಿ

ಅ.ಬ.ಶಿ

బాయిండర
ల. ల. శరత్తు
III

# ್ರಾಂತಿಗಂಗೋತ್ರಿ



ಲಕ್ಕಪ್ಪ ಅ. ಶಿರಹಟ್ಟಿ

ಶಿವಶಕ್ತಿ ಪ್ರಕಾಶನ :: ರಾಯಚೂರು

23
I 6.

ಶ್ರೀ ಬಸವ ಭುವನದ ಶಾಂತಮೂರ್ತಿ,
ಸೊಸೆ ಸೌಭಾಗ್ಯವತಿ, ಸಂಯುಕ್ತಾದೇವಿಗೆ.
ಮಂಗಲಾಶಯದೊಡನೆ

10-11-70

ಲಕ್ಷ್ಮಣ ಶಿರಹಟ್ಟಿ

# ಕ್ರಾಂತಿಗಂಗೋತ್ರಿ

(ಅಕ್ಕನಾಗಮ್ಮನವರ ಚರಿತ್ರೆ)

ಲಕ್ಕಪ್ಪ ಆ. ಶಿರಹಟ್ಟಿ

ಶಿವಶಕ್ತಿ ಪ್ರಕಾಶನ :: ರಾಯಚೂರು

lಲಿಂ. ಚುಕ್ಕಿ ಶಿವಮ್ಮನವರ ಸ್ಮಾರಕ ಗ್ರಂಥಮಾಲೆ : ೧

ಪ್ರಕಾಶಕರು :

ಚುಕ್ಕಿ ಬಂಧುಗಳು
ಶಿವಶಕ್ತಿಪ್ರಕಾಶನ
ಅಮರನಿವಾಸ, ಕೋಟೆ ರಾಯಚೂರು

ಎಲ್ಲ ಹಕ್ಕುಗಳು ಲೇಖಕರವು

ಪ್ರತಿಗಳು : ೧೦೦೦

ನವೆಂಬರ್ ೬, ೧೯೭೦

ಬೆಲೆ : ನಾಲ್ಕು ರೂಪಾಯಿ

ಮುಖಪುಟ : ಶ್ರೀ ಚಂದ್ರಕಾಂತ ಕುಸನೂರ

ಅಚ್ಚುಮಾಡಿದವರು :

ಜನತಾ ಪ್ರಿಂಟರಿ, ಅರಬ್ ಮೊಹಲ್ಲಾ
ರಾಯಚೂರು

# ಮುಡಿಪು



ಲಿಂ. ಚುಕ್ಕಿ ಶಿವಮ್ಮನವರ
ಪುಣ್ಯಸ್ಮರಣೆಗಾಗಿ

—ಪ್ರಕಾಶಕರು

# ಪರಿವಿಡಿ


ಮುನ್ನುಡಿ ... i
ಆಶೀರ್ವಚನಗಳು ... v
ಅಭಿಪ್ರಾಯ ... viii
ಲೇಖಕನ ಮಾತು ... xi
ಪ್ರಕಾಶಕರ ಮಾತು ... xv
ಅಕ್ಕನಾಗಮ್ಮ (ಕವನ) ... xvii

**ಬಾಗೇವಾಡಿಯಲ್ಲಿ**

೧. ಯಾರು ಈ ಕುಮಾರಿ ... ೪
೨. ಅಕ್ಕರೆಯ ಅಕ್ಕ ಮುದ್ದು ತಮ್ಮ ... ೬
೩. ಕರುಣಾಮೂರ್ತಿ ... ೧೦
೪. ಮದುವೆ ... ೧೧
೫. ಶಿವದೇವ-ನಾಗಲಾಂಬೆಯರು ... ೧೬
೬. ಬಸವಣ್ಣನಿಗೆ ಬೆಂಬಲವಾಗಿ ... ೧೯
೭. ಪ್ರಥಮ ಸಂಕಟಕ್ಕೆ ಪರಿಹಾರ ... ೨೩

**ಸಂಗಮದಲ್ಲಿ**

೧. ಪ್ರೇಮಾದರ ಪ್ರಾಪ್ತಿ ... ೨೯
೨. ಕಾಯಕದಲ್ಲಿ ಕಲೆ ... ೩೨
೩. ಶಿವಪ್ರಸಾದ ... ೩೫
೪. ಜ್ಞಾನಭಾನುವಿನುದಯ ... ೪೦
೫. ಹನ್ನೆರಡು ವರ್ಷಗಳ ಬಳಿಕ ... ೪೨
೬. ತಮ್ಮನ ವಧು ... ೪೪
೭. ಮಂಗಲಾಶೀರ್ವಾದ ... ೪೮

## ಕಲ್ಯಾಣದಲ್ಲಿ


೧. ಒರೆಗೆ ಹತ್ತಿದ ಸತ್ವ ... ೫೭
೨. ಸಸಿಯ ಪೋಷಣೆ ... ೬೧
೩. ಭಾವಬಲ ... ೬೫
೪. ಗಹನ ಸಮಸ್ಯೆ ಎದುರಾಯಿತು ... ೭೧
೫. ಪರಿಹಾರಕ್ಕೆ ಪ್ರಯತ್ನ ... ೭೫
೬. ಅಕ್ಕನ ಅಂತರಂಗಕ್ಕೆ ಶಾಂತಿ ... ೮೦
೭. ಕ್ರಿಯಾಯೋಗ ... ೮೫
೮. ಕ್ರಿಯಾಜ್ಞಾನ ಸಮನ್ವಯ ... ೯೧


## ವಿಪ್ಲವ ಕಾಲದಲ್ಲಿ


೧. ಶರಣಧರ್ಮಕ್ಕೊದಗಿದ ಆಪತ್ತು ... ೯೯
೨. ಅಕ್ಕನ ಅವಿಕೃತ ಭಾವ ... ೧೦೧
೩. ವಿಪತ್ಪರಂಪರೆ ... ೧೦೫
೪. ಬಸವಲಿಂಗಾ ಜಯತು ... ೧೧೨
೫. ಹೋರಾಟ ... ೧೧೮
೬. ರುದ್ರಮುನಿಗಳಾಗಮನ ... ೧೨೩
೭. ಕಾದರವಳ್ಳಿಯ ಕಾಳಗ ... ೧೨೯


## ಉಳಿವೆಯಲ್ಲಿ ಮತ್ತು ಎಣ್ಣೆಹೊಳೆಯಲ್ಲಿ


೧. ಮಲೆನಾಡ ಮಹಮನೆ ... ೧೩೭
೨. ಮುತ್ತಿನ ಚಿಪ್ಪು ... ೧೪೧
೩. ಕಿನ್ನರಿ ಒಡೆಯಿತು ... ೧೪೮
೪. ಬೆಳಕು ಅಡಗಿತು ... ೧೫೨
೫. ಕಡೆಯ ರಂಗಸ್ಥಾಪನೆ ... ೧೫೫
೬. ಶಿವನೊಲುಮೆಗೆ ಸರ್ವರ ಕಲ್ಯಾಣ ಚಿಂತನೆ ... ೧೫೮
೭. ಮಹಾಸಾಧನೆಯ ಪ್ರತೀಕ ... ೧೬೩

## ೬ ರುದ್ರಮುನಿಗಳಾಗಮನ

ಚಾವುಂಡರಾಯನ ಅಭಿಮಾನಕ್ಕೆ ಪೆಟ್ಟಾಗಿತ್ತು. ಎರಡನೆಯದಿನ ಉಳಿದ ಬಲದೊಡನೆ ಪಾಳಯವನ್ನು ಕಿತ್ತು ಹತ್ತು ಗಾವುದ ಹಿಂದೆ ಸರಿದು, ಹೆಚ್ಚಿನ ಸೇನೆ ಕಳಿಸಲು ಸೋವಿದೇವನಿಗೆ ಹೇಳಿಕಳುಹಿ ಕೃಷ್ಣೆಯ ತೀರದಲ್ಲಿ ಬೀಡುಬಿಟ್ಟನು. ಆಗ ಶರಣರು ಮೂಗಬಸವದ ಕಡೆಗೆ ಸಾಗಿದ್ದರು. ವೈರಿಗಳು ತಮ್ಮ ಬೆನ್ನು ಬಿಟ್ಟಿಲ್ಲ, ಹೆಚ್ಚಿನ ಸನ್ನಾಹದಿಂದ ಮತ್ತೆ ಬರಲಿದ್ದಾರೆಂಬುದು ಶರಣದಲದ ನಾಯಕರಿಗೆ ಗೊತ್ತಾಯಿತು. ಆದರೆ ಅದಕ್ಕೆ ಕೆಲವು ದಿವಸ ಹಿಡಿಯಬಹುದು. ನಾಗಮ್ಮ, ಚೆನ್ನಬಸವಣ್ಣ, ಮಾಚಯ್ಯ ಪ್ರಮುಖರು ಆಲೋಚನೆಗೊಳಗಾದರು. ಈಗ ಅವರಿಗೆ ಎರಡು ಮಾರ್ಗಗಳು ಮಾತ್ರ ಉಳಿದಿದ್ದವು.

೧. ಈ ಮಧ್ಯಂತರದ ಅವಕಾಶದಲ್ಲಿ ಬೇಗ ಬೇಗ ಪ್ರಯಾಣಿಸಿ ಸಹ್ಯದ ಪಳವುಗಳನ್ನು ಪ್ರವೇಶಿಸಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುವದು. ಗ್ರಂಥ ಭಾಂಡಾರವು ಈ ಮೊದಲೇ ಅಲ್ಲಿಯ ಉಳಿವಿಗೆ ಸಾಗಿಸಲ್ಪಟ್ಟಿದ್ದಿತು.

೨. ಈ ಮಧ್ಯಂತರ ಅವಕಾಶದಲ್ಲಿ ಜನಧನ ಸಾಮಗ್ರಿಗಳಿಂದ ಸೇನಾ ಬಲವನ್ನು ಹೆಚ್ಚಿಸಿಕೊಂಡು ಮೇಲೇರಿ ಬರುವ ಕಲಚೂರ್ಯ ದಳವನ್ನು ಸಂಪೂರ್ಣವಾಗಿ ಸೋಲಿಸಿ ನಿಷ್ಕಂಟಕವಾಗಿ ಪ್ರಯಾಣಮಾಡುವದು.

ಈ ವಿಚಾರದಲ್ಲಿ ಶರಣಧರ್ಮದ ಉಳಿವು ಅಳಿವುಗಳ ಸಮಸ್ಯೆಯೂ ಅಡಕವಾಗಿತ್ತು. ಚೆನ್ನಬಸವಣ್ಣ ಹಿಂಸೆಗೆ ನೊಂದವನಾಗಿದ್ದನು. 'ಹೇಗೂ ಗ್ರಂಥರಾಶಿ ಅರಣ್ಯ ಮಧ್ಯದ ಉಳಿವೆಯನ್ನು ಕಂಡಿದೆ. ತಾವೂ ಅಲ್ಲಿ ಹೋಗಿ ನೆಲಿಸಬೇಕು. ಗಹನಾರಣ್ಯದಲ್ಲಿ ವೈರಿಸೈನ್ಯ ಬರುವದು ಸುಲಭವಲ್ಲ.' ಎಂದು ಆತನ ವಿಚಾರ! ನಾಗಲಾಂಬೆ ಇದನ್ನೊಪ್ಪಲಿಲ್ಲ. 'ಇದರಿಂದ ತಾವು ಪಾರಾಗಿ ಉಳಿಯಬಹುದು. ಮಹಾಮಹಾ ಅನುಭಾವಿಗಳು ಅನುಭವದ ಒರೆಗೆ ಹಚ್ಚಿ ರೂಪಿಸಿದ–ಬಸವೇಶ ಅದರಂತೆ ಜೀವನದುದ್ದಕ್ಕೂ ಆಚರಿಸಿ ಸಿದ್ಧಾಂತಗೊಳಿಸಿದ –ಶರಣಧರ್ಮದ ಕೈ ಬಿಟ್ಟಂತಾಗುವದು. ವೈರಿಗಳು ಅರಣ್ಯದಲ್ಲಿ ಬರದಿದ್ದರೂ

ನಾಡಿನಲ್ಲಿ ಅಲ್ಲಲ್ಲಿ ನೆಲಿಸಿರುವ ಈ ಮತದ ಅನುಯಾಯಿಗಳನ್ನು ನಾಶಮಾಡದೆ ಬಿಡುವದಿಲ್ಲ. ಹೀಗೆ ತನ್ನನ್ನು ಕಾಪಾಡಿಕೊಳ್ಳದ ಸಮಾಜಧರ್ಮದ ಮೇಲೆ ಸಾಮಾನ್ಯರ ಶ್ರದ್ಧೆ ಉಳಿಯುವದಿಲ್ಲ. ಆದ್ದರಿಂದ ಈ ಧರ್ಮದವರಲ್ಲಿ ವೀರ ವೃತ್ತಿಯನ್ನುಂಟುಮಾಡಬೇಕು. ಭೀರುತ್ವವನ್ನು ಅಳಿಯಬೇಕು. ತತ್ವಘನತೆ ಯಲ್ಲಿ ಅಭಿಮಾನವಿಟ್ಟಿರುವ ಪಾಳಯಗಾರ ದೊರೆಗಳೂ ಮಂಡಲಾಧಿಕಾರಿಗಳೂ ನಮಗೆ ನೆರವಾಗುವರು. ಬಿಜ್ಜಳನ ರಾಜ್ಯಾಪಹಾರಕ್ಕೆ ಬಲಿಗೊಂಡ ಇವರೆಲ್ಲರು, ದುರ್ಬಲವಾಗುತ್ತಿರುವ ಕಲಚೂರ್ಯ ಆಧಿಪತ್ಯಕ್ಕೆ ನಿಷ್ಠರಾಗಿರುವದಿಲ್ಲ. ಸ್ವತಂತ್ರರಾಗಲು ಯತ್ನಿಸುತ್ತಿದ್ದಾರೆ. ಮೇಲೇರಿ ಬರುವ ಅನಿಷ್ಟ ಶಕ್ತಿಗಳನ್ನು ನಿಗ್ರಹಿಸುವಾಗ ಹಿಂಸೆ ಅನಿವಾರ್ಯ! ಮತ್ತೊಮ್ಮೆ ಇತ್ತ ಬಾರದಂತೆ ವೈರಿಬಲ ವನ್ನು ನಾವು ಒಮ್ಮೆ ಸೋಲಿಸಿ ಅಟ್ಟಬೇಕು. ಆಗಮಗಳಲ್ಲಿ ಹೇಳಿದ ಶೈವ ಪ್ರಭೇದದ ಹೆಸರೊಂದಾಗಿರುವ ವೀರಶೈವ ಎಂಬ ನಾಮವನ್ನು ವಿಶಾಲತತ್ವದ ಈ ಮತವು ಒಳಗೊಂಡಿದೆ. ಅದಕ್ಕೆ ಅನ್ವರ್ಥವಾಗುವಂತೆ ಆಚರಿಸಿ ಉಳಿದು ಬೆಳೆದು ಬಾಳಬೇಕು.' ಇದು ನಾಗಮ್ಮನ ವಿಚಾರ! ಮಾಚಯ್ಯನ ವೀರ ವೃತ್ತಿಗೆ ಇದೇ ಸರಿಯೆನಿಸಿತು. ಕಿನ್ನರಯ್ಯ, ರೇಚಯ್ಯ, ವೃದ್ಧ ಕಕ್ಕಯ್ಯ ಇವರೆಲ್ಲರು ಇದನ್ನೇ ಅನುಮೋದಿಸಿದರು. ಕೇವಲ ತತ್ವಪ್ರಧಾನಮೂರ್ತಿ ಚೆನ್ನಬಸವಣ್ಣನು ಸಮಾಜಧರ್ಮದ ನೀತಿಗೆ ತಲೆವಾಗಿ ಒಪ್ಪಿಕೊಂಡನು. ಅವ ರೆಲ್ಲರು ಆತ್ಮರಕ್ಷಣೆಗಿಂತ ಧರ್ಮರಕ್ಷಣೆಯನ್ನು ಮುಂದಿಟ್ಟುಕೊಂಡು ಹೋರಾ ಡುವ ನಿಶ್ಚಯಮಾಡಿದರು.

ಈ ಹೊತ್ತಿಗೆ ಮಲೆನಾಡಿನಲ್ಲಿ ಮುಂಗಾರು ರಭಸದಿಂದ ಸುರಿಯಲಾರಂಭಿ ಸಿತ್ತು. ಆಗ ಅರಣ್ಯಮಧ್ಯದಲ್ಲಿ ವಸಹಾತು ಮಾಡುವದೂ ಸಾಧ್ಯವಿರಲಿಲ್ಲ. ಹೇಗೂ ವಿರೋಧಿಗಳು ಹಿಂದೆ ಸರಿದದ್ದರಿಂದ ಮಳೆಗಾಲ ಮುಗಿಯುವ ವರೆಗೆ ಶರಣದಲವು ಬೆಳವಲದಂಚಿನ ನಾಡಿನಲ್ಲಿಯೇ ಕಳೆಯುವದಾಯಿತು. ತಮ್ಮ ಪಾಳಯವನ್ನು ಒಂದೇ ಕಡೆಯಲ್ಲಿ ದೊಡ್ಡದಾಗಿರುವದರಿಂದ ಅನ್ನಸಾಮಗ್ರಿಗಳ ಪೂರೈಕೆ ಕಷ್ಟದಾಯಕವಾಗುವದೆಂದು ಶರಣನಾಯಕರು ನಾಲ್ಕು ಗಾವುದಂತರದ ವಲಯದಲ್ಲಿಯ ಹಲವು ಗ್ರಾಮಗಳಲ್ಲಿ ಪಾಳಯಗಳನ್ನಿಟ್ಟರು. ನಾಗಮ್ಮ, ಚೆನ್ನಬಸವಣ್ಣ ಮುಂತಾದ ಪ್ರಮುಖರಿರುವ ಪಾಳಯವು ಕೇಂದ್ರ ಶಿಬಿರ

ವಾಗಿದ್ದಿತು. ಆಯಾ ಪಾಳಯುಗಳಲ್ಲಿ ಶರಣರು ತಂಡತಂಡವಾಗಿ ಶಾಂತಿಯಿಂದ ಶಿವಾನುಭವ ವಿಚಾರದಲ್ಲಿ ತೊಡಗಿದ್ದರು. ಎಲ್ಲ ಪಾಳಯುಗಳ ನಾಯಕರು ಆಗಾಗ ಕೂಡಿ ಪರಿಸ್ಥಿತಿಯ ಪರಿಶೀಲನೆ ಮಾಡಿ ಮುಂದಿನ ಕಾರ್ಯಾಚರಣೆ ಯನ್ನು ನಿರ್ಧರಿಸುತ್ತಿದ್ದರು. ಚೆನ್ನಬಸವ ನಾಗಲಾಂಬೆಯರ ಬೋಧೆಗಳೂ ಸ್ವಯಾಚಾರ ಸಾಧನೆಗಳೂ ಸುತ್ತುಮುತ್ತಲಿನ ಜನರ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತಿದ್ದವು.

ನಾಗಮ್ಮನ ಸ್ವಾನುಭವ ಅರಳುತಲಿತ್ತು. ಯೋಗಸಾಧನೆಯ ಸೌಖ್ಯ ದಲ್ಲಿ ಕೊರತೆ ಇರಲಿಲ್ಲ. ಹೊರಗಿನ ಸಮಾಜಧರ್ಮದ ಪ್ರಜ್ಞೆಯೂ ಪೂರ್ಣ ವಾಗಿತ್ತು. ಯಾವಾಗ ಏನು ಮಾಡಿದರೂ ಅದರಲ್ಲಿಯೇ ಯೋಗ ಪಡೆಯುತ್ತಿ ದ್ದಳು. ಮಹಾಯೋಗಿಣಿ ಆ ಶಿವಯೋಗಿಣಿ! ಚೆನ್ನಬಸವಣ್ಣನಂತೂ ಸುಜ್ಞಾನ ದಾಗರ ಅವನ ಕೀರ್ತಿ ಆ ನಾಡಿಗೆ ಹೊಸದಲ್ಲ. ಆ ಸನ್ನಿಧಿಯ ದರ್ಶನ ಹೊಸದು. ಸಮೀಪದ ಅನುಭಾವಿಗಳೂ ರಾಜಕಾರಣಿಗಳೂ ಬಂದು ಹೋಗುತ್ತಿದ್ದರು. ಅನುಭಾವಿಗಳು ಆ ತಾಯಿ ಮಗನ ಪರಮಾನುಭಾವ ಪರಿಪೂರ್ಣತೆಯನ್ನು ಮೆಚ್ಚಿದ್ದರೆ, ರಾಜಕಾರಣಿಗಳು ನಾಗಮ್ಮನ ವ್ಯಾವಹಾರಿಕ ಪ್ರಸಂಗಾವಧಾನವನ್ನೂ ನಿಷ್ಕಪಟದ ಮುಂಧೋರಣೆಯನ್ನೂ ಮೆಚ್ಚಿದ್ದರು.

ಮೊದಲನೆಯ ಪ್ರಹರದ ಹೊತ್ತು. ಚೆನ್ನಬಸವಣ್ಣನು ಕರಣ ಹಸಿಗೆಯ ದ್ವಿತೀಯ ಪ್ರತಿಯನ್ನು ಪರಿಶೀಲಿಸುತ್ತ ಅದರ ಕೆಲಸಂದರ್ಭಗಳನ್ನು ಮಾಚಯ್ಯನೊಡನೆ ವಿವೇಚಿಸುತ್ತ ತನ್ನ ಚಿಕ್ಕ ಗೂಡಾರದಲ್ಲಿ ಕುಳಿತಿದ್ದನು. ಜಂಗಮರ ತಂಡವೊಂದು ದಿನ್ನೆಯಿಳಿದು ಬರುತ್ತಿದೆಯೆಂದು ಹೊರಗಿನವರು ಒಳಗೆ ಬಂದು ವರದಿಮಾಡಿದರು. ಕೂಡಲೆ ಅವರಿಬ್ಬರು ಹೊರಗೆ ಬಂದು, ನೋಡಿದರು. ಸನ್ಮಾನಿಸಿ ದಾರಿತೋರಿ ಕರೆತರಲು ರೇಚಯ್ಯನನ್ನು ಮುಂದಕ್ಕೆ ಕಳುಹಿ ತಾವು ನಿರೀಕ್ಷಿಸುತ್ತ ನಿಂತರು. ಹರಹರಮಹಾದೇವ ಎನ್ನುತ್ತ ಆ ಗುಂಪು ಸನಿಹಕ್ಕೆ ಬಂದಿತು. ಅಲ್ಲಿಂದಲೇ ಕುದುರೆಯಿಂದಿಳಿದು ರುದ್ರಮುನಿ ದೇವರು ಮುಂದೆ ಬಂದರು. ಮಾಚಯ್ಯನ ನೆರವಿನಿಂದ ಗುರ್ತಿಸಿದ ಚೆನ್ನ ಬಸವಣ್ಣನು ಕೈಮುಗಿದುಕೊಂಡು ಮುಂದೆ ಹೋದನು. ಅವರಿಬ್ಬರು ಪರ ಸ್ಪರ ವಂದಿಸಿದರು. ಮಾಚಯ್ಯನೂ ಶರಣು ಶರಣೆಂದು ಬಾಗಿದನು. ಆದರ ದಿಂದ ಬರಮಾಡಿಕೊಂಡು ಗೂಡಾರದೊಳಗೆ ಕರೆದೊಯ್ದರು.

ರುದ್ರಮುನಿದೇವರ ಉತ್ಸಾಹದ ವಾಣಿ ಹೊರಹೊಮ್ಮಿತು :

"ಚೆನ್ನಬಸವಣ್ಣನವರೇ ನಿಮ್ಮ ಮೇಲಾಗುತ್ತಿರುವ ದಾಳಿಯನ್ನೂ ನೀವು ಅದನ್ನು ಧೈರ್ಯ-ಶೌರ್ಯಗಳಿಂದ ಎದುರಿಸಿ ಹಿಮ್ಮೆಟ್ಟಿಸಿದುದನ್ನೂ ನಾವು ಸಂಚಾರದಲ್ಲಿಯೇ ಕೇಳಿದೆವು. ಧರ್ಮರಕ್ಷಣೆಗಾಗಿ ನೀವು ಹೋರಾಡುತ್ತಿರುವಾಗ ನನ್ನಿಂದಾಗುವ ಸೇವೆ ಸಲ್ಲಿಸಲು ನಾನಿತ್ತ ಬಂದೆನು."

"ಬಹಳ ಸಂತೋಷ ಬುದ್ಧಿ, ಧರ್ಮವು ಧರ್ಮಮಾರ್ಗದಿಂದಲೇ ರಕ್ಷಿಸಲ್ಪಡಬೇಕು. ಮುಂದಿನ ದಾರಿಯನ್ನು ತಾವು ತೋರಿಸಬೇಕು."

"ದಾರಿ ಸ್ಪಷ್ಟವಿದೆ. ಅದನ್ನೇ ನೀವು ಅನುಸರಿಸುತ್ತಿದ್ದೀರಿ, ಚೆನ್ನಬಸವಣ್ಣನವರೇ, ಚಿಂತಿಸಬೇಕಾಗಿಲ್ಲ; ಸಾಮಾನ್ಯರೇ ಈ ಮಾಚಯ್ಯನವರು! ಇಂತಹರಿದ್ದಾರಲ್ಲ. ಇವರು ಭಾವಬಲ್ಲಿದರಾದಂತೆ ಬಾಹುಬಲ್ಲಿದರೂ ಆಗಿದ್ದಾರೆ. ದ್ರೋಹಿಗಳ ಮೇಲೆ ಮಾಚಯ್ಯ ಖಡ್ಗವೆತ್ತಿದುದನ್ನು ಕಂಡವರು ವೀರಭದ್ರ ಹೀಗೆಯೇ ಇದ್ದಿರಬಹುದೆಂದು ತರ್ಕಿಸುತ್ತಾರಂತೆ. ಅವ್ವೆ ಎಲ್ಲಿ? ಅವರ ಹೆಸರು ಬಹಳವಾಗಿ ಬಹುದೂರ ಕೇಳಿಸುತ್ತಿದೆ."

"ಆಗಲೇ ಅರ್ಚನೆ ತೀರಿಸಿಕೊಂಡು ಅಡುಗೆಯ ಗೂಡಾರಕ್ಕೆ ಹೋಗಿದ್ದಾರೆ. ಪ್ರಸಾದವ್ಯವಸ್ಥೆ ನೋಡಿಕೊಳ್ಳುತ್ತಿದ್ದಾರೆ." ರೇಚಯ್ಯ ಹೇಳಿದನು.

"ಅಲ್ಲಿಯೇ ಹೋಗಿ ಕಾಣುವಾ, ಬನ್ನಿ."

ಎದ್ದು ನಡೆದರು ರುದ್ರಮುನಿಗಳು. ಕೆಳಗೆ ಮಾವಿನ ತೋಪಿನಲ್ಲಿತ್ತು ಪ್ರಸಾದದ ಛಾವಣಿ. ಚೆನ್ನಬಸವಣ್ಣ, ಮಾಚಯ್ಯ ಮುಂದಾಗಿ ನಡೆದರು. ಉತ್ಸಾಹ ಉಕ್ಕುವ ರುದ್ರಮುನಿಗಳು ಸುಮ್ಮನೆ ಸಾಗಿರಲಿಲ್ಲ :

"ನಾಗಮ್ಮನವರ ಜೀವನವೊಂದು ಮಹಾನದಿಯ ಪ್ರವಾಹ. ಅದು ಹರಿಯದ ಭೂಮಿಯಿಲ್ಲ; ತಣಿಸದ ಜನವಿಲ್ಲ. ಅದರ ಸಂಪರ್ಕದಿಂದ ಅಜ್ಞಾನದ ಮರುಭೂಮಿ ಸುಜ್ಞಾನದ ಫಲ ಬೆಳೆಯಿತು. ಕೊಳಚೆ-ಕಂಟಕಗಳು ಕೊಚ್ಚಿಹೋದವು. ಇನ್ನೂ ಸಾಗರ ಸೇರುವ ವರೆಗೆ ಈ ನದಿಯ ಉದಕದಿಂದ ಆತ್ಮತೃಪ್ತಿ ಪಡೆವವರದೆಷ್ಟು ಜನರೋ? ಕಲ್ಯಾಣದಿಂದ ಹೊರಬಿದ್ದ ಶರಣ-ಶರಣೆಯರು ಈ ತಾಯಿಯ ಕೀರ್ತಿಯನ್ನು ಹಾಡುತ್ತಿದ್ದಾರೆ. ನಾವು ನಿನ್ನೆಮೊನ್ನೆ

ಬರುವಾಗ ಈ ಭಾಗದ ಜನರು ಅಲ್ಲಲ್ಲಿ ನಮ್ಮನ್ನು ಬರಮಾಡಿಕೊಂಡು ಧರ್ಮ ರಕ್ಷಣೆಗಾಗಿ ತಮ್ಮ ಪಾಲನ್ನು ಸಲ್ಲಿಸುವ ಸಿದ್ಧತೆ ನಡೆಸಿದ್ದು ದು ಕಂಡುಬಂದಿತು."

ಹೊರಗಿನ ದನಿ ಕೇಳಿ ಬಾಗಿಲಿಗೆ ಬಂದು ಕಂಡು, ನಾಗಮ್ಮ ಸಂತಸದಿಂದ ಮಹಿಗೆ ಮೈಯಿಕ್ಕಿ ವಂದಿಸಿದಳು. ನೆಲಮುಟ್ಟಿ ಬಾಗಿ ಆ ತಾಯಿಯ ವಂದನೆ ಸ್ವೀಕರಿಸಿದರು ರುದ್ರಮುನಿದೇವರು.

"ಭಲಾ, ತಾಯಿ, ಚೆನ್ನಬಸವಣ್ಣನ ಷಟ್‌ಸ್ಥಲ ಧ್ವಜ ಬಿರುಗಾಳಿಗೆ ಸಿಲುಕಿತ್ತು. ನಿನ್ನ ಸುಭದ್ರ ಪವಿತ್ರ ಹಸ್ತವನ್ನು ಕೊಟ್ಟು ಕಾಪಾಡಿದೆ."

"ನಾನು ಅಬಲೆ ಸ್ವಾಮೀ, ಇವರೆಲ್ಲ ವೀರರು. ಅದರಲ್ಲಿ ನಿಷ್ಠೆತಾಳಿದವರಿದ್ದಾರೆ. ಆ ಗಾಳಿ ಇನ್ನೂ ಊದುತ್ತಿದೆ."

"ಊದಲಿ, ಅದರ ಯೋಚನೆಯನ್ನೆಲ್ಲ ನಾನು ಹೇಳುತ್ತೇನೆ. ಇನ್ನು ಚಿಂತೆ ಬೇಡಮ್ಮ !"

ಒಳಗೆ ಆ ಮಗ್ಗಲಿಗಿದ್ದ ಗಂಗಮ್ಮ ನೋಡಿ, ಅವಸರದಿಂದ ಬಂದು ಗುರುಚರಣದ ಮೇಲೆ ತಲೆಯಿಟ್ಟರು. ಕಣ್ಣೀರಿನ ಬಿಸಿ ತೊಟ್ಟುಗಳೆರಡು ಅವರ ಪಾದದ ಮೇಲೆ ಬಿದ್ದವು.

"ಏಳು ಮಗಳೇ, ಬಸವಣ್ಣನವರು ಬಯಲಾದುದಕ್ಕೆ ನೀನು ವ್ಯಥೆಗೊಂಡಿರುವದು ಸಹಜವದೆ. ನೀನವರ ಮೂರ್ತಿಯನ್ನು ನಿನ್ನಂತರಂಗದಲ್ಲಿ ನೋಡು; ಹೊರಗೆ ಹರಡಿದ ನಿನ್ನ ಪತಿಯ ಬೆಳಕನೋಡು. ತಗ್ಗುದಿನ್ನೆಯಾಗಿ ಬೆಳೆಬಾರದಂತಾಗಿರುವ ವೀರಶೈವದ ಹೊಲವನ್ನು, ಬಸವಣ್ಣನವರು ಸಮನಾಗಿಸಿ, ಮುಳ್ಳುಪೊದೆ, ಕಸಕಡ್ಡಿ, ಕಲ್ಲುಗುಡ್ಡೆಗಳನ್ನು ಕಿತ್ತು ತೆಗೆದು ನಿತ್ಯ-ಸತ್ಯಶಾಂತಿಯ ಫಲಕೊಡುವ, ಸದ್ಭಕ್ತಿ-ಸದಾಚಾರ-ಸೇವೆ ಕಾಯಕ-ದಾಸೋಹಗಳ ಬೆಳೆ ಬಿತ್ತಿದ್ದಾರೆ. ಆ ಬೆಳೆಯನ್ನು ನಾವೆಲ್ಲ ಕಾಪಾಡಿಕೊಳ್ಳಬೇಕು. ಅದರಲ್ಲಿ ನೀನೀಗಾಗಲೇ ಪಾಲುಗೊಂಡು ಈ ಹಿರಿಯಪ್ಪನೊಡನೆ ಮುಂದುವರಿದಿರುವೆ. ಅನುಭಾವಿಗಳ ಮಹತ್ವ ಆಪತ್ತಿನಲ್ಲಿ ಗೊತ್ತಾಗುವದು. ಇತ್ತೀಚಿನ ನಿಮ್ಮ ಸಂಕಟಗಳಲ್ಲಿ ನೀವು ತಾಳಿದ ನಿಲವಿನಿಂದ ನಿಮ್ಮೆಲ್ಲರ ಹೆಸರು ಬಹುದೂರ ಕೇಳುತ್ತವೆ. ನೀನು ಕರ್ತವ್ಯದ ಸಮ್ಮುಖದಲ್ಲಿರುವೆ. ದುಃಖಿಸಬೇಡ ಗಂಗಮ್ಮ ತಾಯೀ."

"ಆಗಲಿ ಅಪ್ಪಾ ! ನಿಮ್ಮ ಸೂಚನೆ ಶಿರಸಾವಹಾನ್ಯ !"

ಬಾಲ್ಯದಲ್ಲಿ ಗಂಗಾಂಬೆ ತಂದೆಯೊಡನೆ ಸಂಗಮದಲ್ಲಿ ಲಿಂಗಧಾರಣಮಾಡಿ ಕೊಂಡಿದ್ದಳು. ಕಲ್ಯಾಣದಲ್ಲಿ ಮದುವೆಯ ಮೊದಲು ರುದ್ರಮುನಿಗಳಿಂದ ಅನುಗ್ರಹಿತಳಾಗಿ ಜ್ಞಾನೋಪದೇಶ ಪಡೆದಿದ್ದಳು. ಅವರು ಜ್ಞಾನ ಗುರುಗಳಾಗಿದ್ದರು.

ಮಾಚಯ್ಯ ಮುಂದೆ ಬಂದು ಹೇಳಿದನು:

"ದೇವರು, ಪ್ರಯಾಣದ ಆಯಾಸವಾಗಿದೆ ತಮಗೆ. ತಮ್ಮ ಸ್ನಾನದ ವ್ಯವಸ್ಥೆಯಾಗುತ್ತಿದೆ. ಗಣಂಗಳನ್ನೆಲ್ಲ ಸ್ನಾನಕ್ಕೆ ಕಳಿಸಿದ್ದೇನೆ. ಅರ್ಚನೆ-ಅರ್ಪಿತ ಳಾಗಿ ಸ್ವಲ್ಪ ವಿಶ್ರಾಂತಿಗೊಳ್ಳುವದಾಗಬೇಕು. ಆಮೇಲೆ ಸದ್ಯದ ಸಮಸ್ಯೆಯ ಪರಿಹಾರಕ್ಕೆ ಸಾವಧಾನವಾಗಿ ಸರಿಯಾಗಿ ಆಲೋಚಿಸಬೇಕಾಗಿದೆ."

"ಸರಿ ಹಾಗೆ ಆಗಲಿ" ರುದ್ರಮುನಿಗಳು ತಮ್ಮ ಸಾಮಾನುಗಳತ್ತ ನಡೆ ದರು ಚೆನ್ನಬಸವಣ್ಣನೊಡನೆ. ಗಂಗಮ್ಮ ಪೂಜಾಸ್ಥಳದಲ್ಲಿ ಸಲಕರಣೆಗಳ ಜೋಡಣೆ ಮಾಡಿದಳು. ನಾಗಮ್ಮ ಪಾಕಶಾಲೆಯ ಕೆಲಸ ಜಾಗ್ರತಗೊಳಿಸಿದಳು.

## ೭ ಕಾದರವಳ್ಳಿಯ ಕಾಳಗ

ಬೇಗಿನ ಹೊತ್ತಿನಲ್ಲಿ ಮುಂದಿನ ಗೂಡಾರದಲ್ಲಿ ಶರಣಪ್ರಮುಖರು ಸೇರಿದ್ದರು. ಪರಿಸ್ಥಿತಿಯ ವಿವೇಚನೆ ನಡೆದಿತ್ತು. ಚೆನ್ನಬಸವಣ್ಣನ ಪ್ರಶ್ನೆ:

"ಯುದ್ಧವು ಧರ್ಮಸಮ್ಮತವೇ ? ಮತಾಚರಣೆಗೆ ಇದು ಅನಿವಾರ್ಯವಾದ ವಿಧಾನವೇ ?"

"ಸಾಮಾನ್ಯವಾಗಿ ಸಮ್ಮತವಾದುದಲ್ಲ; ಅಗತ್ಯ ವಿಧಾನವೂ ಅಲ್ಲ. ಕೊನೆಯ ಪಕ್ಷಕ್ಕೆ ಧರ್ಮಸಮ್ಮತವಾಗುವದು. ಧರ್ಮವು ದೇಶಕಾಲ ಪರಿಸ್ಥಿತಿಯನ್ನು ಅನುಸರಿಸಿ ಬದಲಾಗುವದು. ಯಾಕೆ ಅಮ್ಮನವರೇ ನೀವು ಹೇಳಿರಿ."

ರುದ್ರಮುನಿಗಳು ನಾಗಮ್ಮನವರನ್ನು ಕೇಳಿದರು.

"ಹೌದು ದೇವರು, ಮತಾಚರಣೆಗೆ ಮೂರು ವಿಧಾನಗಳು: ಅದರ ನೈತಿಕ, ತಾತ್ವಿಕ ವಿಧಾನಗಳು ನಿತ್ಯವಾದವುಗಳು. ಅವು ದರ್ಶನ ಸ್ವರೂಪ; ಬದಲಾಗಬಾರದು. ಮೂರನೆಯದಾದ ಧಾರ್ಮಿಕ ವಿಧಾನವು ಕಾಲಪರಿಸ್ಥಿತಿಗೆ ಅಧೀನವಾಗಿ ಹೊಂದಿಕೊಳ್ಳುತ್ತ ಸಾಗಿ ನೈತಿಕ ತಾತ್ವಿಕ ವಿಧಾನಗಳಿಗೆ ರಕ್ಷಣೆ ನೀಡಬೇಕು. ಇದನ್ನೇನು ಚೆನ್ನಬಸವಣ್ಣ ಅರಿಯರೆ? ಅವರು ಜೀವ ಹಿಂಸೆಗೆ ರೋಷಿಕೊಂಡಿದ್ದಾರೆ. ರಕ್ಷಣೆ ಈಗ ಅಗತ್ಯವಾಗಿದೆ."

"ಅದೇ ಮುಖ್ಯ! ವಿರೋಧಿಗಳು ಒಮ್ಮೆ ಈ ನಿಮ್ಮ ದಳವನ್ನು ಸದೆಬಡಿದು ಚದುರಿಸಿದರೆಂದರೆ ತೀರಿತು ಕಟ್ಟೊಡೆಯಿತು! ದೇಶದಲ್ಲಿಯ ಲಿಂಗವಂತರ ಮಠಗಳು ಸಂಸ್ಥೆಗಳು ಅಲ್ಲಲ್ಲಿಯ ವಿರೋಧಿಗಳ ಉಪಟಳದಿಂದ ನಾಶವಾಗಿ ಬಿಡುವವು. ಬಸವಣ್ಣನವರು ಬಹುಮುಖದಿಂದ ಸ್ಥಾಪಿಸಿದ ಸಮಾನತೆ ಹಾಳಾಗಿ ಹೋಗುವದು; ಸಮಾಜಶೋಷಣೆ ಮತ್ತೆ ನಡೆಯುವದು. ನಿರಂತರ ಹಿಂಸೆಯನ್ನು ತಡೆಯುವದಕ್ಕಾಗಿ ಕೊನೆಗೆ ತಾತ್ಕಾಲಿಕ ಹಿಂಸೆ ಅಗತ್ಯ, ಅದು ಕ್ಷಮ್ಯ! ಇವರ ಹೊರತು ಹಿಂಸೆ ಇಲ್ಲಿ ಯಾರಿಗೆ ಸೇರುತ್ತದೆ? ರಕ್ತರಂಜನೆ ಯಾರಿಗೆ ಬೇಕಾಗಿದೆ?"

ಚೆನ್ನಬಸವಣ್ಣನವರು ರುದ್ರಮುನಿಗಳ ತೀಕ್ಷ್ಣದೃಷ್ಟಿಯನ್ನು ಎದುರಿಸ ದಾದರು. ತತ್ವಸಿದ್ಧಾಂತ ಮುಖ್ಯ! ಅದರ ರಕ್ಷಣೆಗೆ ಯುದ್ಧ ಅನಿವಾರ್ಯ ವಾದರೆ ಆಗಲಿ!' ಎನ್ನತೊಡಗಿತ್ತವನ ಮನಸ್ಸು.

"ನಮ್ಮ ಈ ಹೋರಾಟಕ್ಕೆ ಲೋಕಾಭಿಪ್ರಾಯ ಅನುಕೂಲವಾಗಿದೆಯೇ ಸ್ವಾಮೀ?" ತಮ್ಮವರ ಎದೆಗಟ್ಟಿಗೊಳಿಸುವದಕ್ಕೆ ನಾಗಮ್ಮ ಬೇಕಂತೆ ಕೇಳಿದಳಿದನ್ನು.

"ಓಹೋ ಅನುಕೂಲವಿಷ್ಟೇ ಅಲ್ಲ, ವಿಪುಲ ಸಹಾಯವೂ ಸಲ್ಲಲಿದೆ. ಬಸ ವಣ್ಣನವರ ಆರ್ಥಿಕ ಮತ್ತು ಸಾಮಾಜಿಕ-ನೂತನ ವ್ಯವಸ್ಥೆಗೆ ಮೆಚ್ಚಿದ ಮಾಂಡ ಲಿಕರು-ಸಾಮಂತರು ಕಲ್ಯಾಣದ ಅಧಿಪತ್ಯಕ್ಕೆ ಅಂಕಿತರಾಗಿದ್ದರು. ಬಿಜ್ಜಳನು ಸ್ವಾರ್ಥಿಗಳ ಸಹಾಯ ಪಡೆದು ಚಾಲುಕ್ಯಸಿಂಹಾಸನವನ್ನು ಅಪಹರಿಸಿದ್ದರಿಂದ ಅಸಹ್ಯಪಟ್ಟ ಇವರೆಲ್ಲರು ಸ್ವತಂತ್ರರಾಗಲು ಯತ್ನಿಸಿ, ಸೋವಿದೇವನ ಅಧಿಕಾರ ವನ್ನು ನಿರಾಕರಿಸುತ್ತಿದ್ದಾರೆ. ನೂತನ ಸಮಾಜ ಧರ್ಮವನ್ನು ರಕ್ಷಿಸುವದಕ್ಕಲ್ಲದೆ ಸೋವಿದೇವನ ಬಲವನ್ನು ಮುರಿಯುವದಕ್ಕೂ ಅವರೆಲ್ಲರು ನಿಮಗೆ ಸಹಾಯ ಮಾಡುವದೆಂದು ನಿಶ್ಚಯಿಸಿದ್ದಾರೆ.

ನಾಗಮ್ಮ ಕೃತಜ್ಞತೆಯಿಂದ ನುಡಿದಳು:

"ಧರ್ಮರಕ್ಷಣೆಗೆ ಜನರಲ್ಲಿ ಉಂಟಾದ ಈ ಹುಮ್ಮಸು ತಮ್ಮ ಉಪ ದೇಶದ ಪರಿಣಾಮವೂ ಆಗಿರಬಹುದು. ಸೌದತ್ತಿಯ ರಟ್ಟದೊರೆಗಳು ಐವತ್ತು ಬಂಡಿಗಳಲ್ಲಿ ಧಾನ್ಯಗಳನ್ನು ಹೇರಿ ಕಳಿಸಿದ್ದಾರೆ. ಸಂಪದ್ಗ್ರಾಮದ ಒಡೆಯರು ತಮ್ಮ ಕಣಜಗಳನ್ನು ನಮ್ಮ ದಲದವರಿಗೆ ಮುಕ್ತದ್ವಾರವಿಟ್ಟಿದ್ದಾರೆ. ಪಲಾ ಸಿಕಾ ನಂದಿಗಡ ಕಂಪಣಗಳ ಅಧಿಪತಿಗಳು ಭತ್ತ ಕುಟ್ಟಿಸಿ ಸಾಕಷ್ಟು ಅಕ್ಕಿಯನ್ನೇ ಹೇರಿ ಕಳಿಸಿದ್ದಾರೆ."

"ಸಹಜವದೆ ನಾಗಮ್ಮನವರೆ, ಇವರಿಗೆ ಹಾಗೆ ಗೋವೆಯ ಕದಂಬರ ಕೇಶಿ ರಾಜರ ಆಜ್ಞೆಯಾಗಿದೆ. ಕೇಶಿರಾಜರ ತಂದೆ ಶಿವಚಿತ್ತರಾಜರು ಬಸವಣ್ಣನವರ ಭಕ್ತರು ಮಿತ್ರರು ಆಗಿದ್ದರು. ಬಿಜ್ಜಳನ ರಾಜ್ಯದಾಹವನ್ನು ಎದುರಿಸಿದ ಸಾಮಂತರಲ್ಲಿ ಅವರೇ ಮೊದಲಿಗರು."

"ನಮ್ಮ ಗ್ರಂಥಭಾಂಡಾರವು ಜಯಕೇಶಿರಾಜರ ರಕ್ಷಣೆಯಲ್ಲಿಯೇ ಸುರಕ್ಷಿತವಾಗಿದೆ" ಚೆನ್ನಬಸವಣ್ಣನೆಂದನು.

"ಉಳಿವೆಯ ವಸಹಾತಕ್ಕೆ ಅವರೇ ಮುಖ್ಯಾಧಾರ" ಮಾಚಯ್ಯ ಹೇಳಿದನು. ಉತ್ಸಾಹದಿಂದ ಮಾತು ಮುಂದುವರಿಸಿದರು ರುದ್ರಮುನಿಗಳು.

"ಕರವೀರಪುರ, ಕರ್ಹಾಡಗಳ ಶಿಲಾಹಾರ ರಾಜರು ತಮ್ಮ ತಲೆಯ ಮೇಲೆ ಕಲಚೂರ್ಯ ಪ್ರಭುತ್ವವನ್ನು ಒಪ್ಪುವ ಸಂಭವ ಹೇಗೆ? ಅವರೂ ಅದನ್ನು ನಿರಾಕರಿಸಿ ಸ್ವಾತಂತ್ರ್ಯವನ್ನು ಘೋಷಿಸಿದ್ದಾರೆ. ಕರ್ಹಾಡದ ವಿಜಯಾರ್ಕನು ಚಾಲುಕ್ಯ ಮಹಾರಾಣಿಯಾಗಿದ್ದ ತಮ್ಮ ತಂಗಿಯ ಅಪಚಾರ ಮಾಡಿದ ಬಿಜ್ಜಳನ ಮೇಲೆ ಕ್ರೋಧಸಂತಪ್ತನಾಗಿದ್ದನು. ಅವನ ತರುಣ ಪುತ್ರ ರವಿದೇವನು ನಿಮ್ಮೊಡನೆ ಕೂಡಿ ಸೋವಿದೇವನ ಬಲವನ್ನು ಮುರಿಯಲು ಆತುರನಾಗಿದ್ದಾನೆ. ಇನ್ನು ಸೊವಿದೇವನ ಸೈನ್ಯವು ಸೊನ್ನಲಾಪುರವನ್ನು ದಾಟಿ ಬರುವದನ್ನು ಯಾವ ಮಾಂಡಲೀಕನೂ ಸಹಿಸುವದಿಲ್ಲ. ಕ್ರಾಂತಿಯ ಪರಿಣಾಮವಾಗಿ ನೀವೀಗ ಸೋವಿದೇವನ ರಾಜ್ಯದಲ್ಲಿಲ್ಲ. ನೀವು ಈ ಪ್ರದೇಶದಲ್ಲಿ ಬೇಕಾದ ಹಾಗೆ ಸಂಚರಿಸಬಹುದು. ಮತಪ್ರಚಾರ ನಡಿಸಬಹುದು. ಶ್ರಾವಣವನ್ನು ಮುಗಿಸಿ ಮಲೆಯಲ್ಲಿ ಮಳೆ ಕಡಿಮೆಯಾದ ಬಳಿಕ ಅಲ್ಲಿ ವಸಹಾತು ಮಾಡಲಿಕ್ಕೂ ತೆರಳಬಹುದು."

"ಚಾವುಂಡರಾಯನು ಮತ್ತೆ ಬರುವದು ನಿಶ್ಚಿತವಿದೆ ಸ್ವಾಮೀ"—ಮಾಚಯ್ಯ ಎಂದನು.

"ನಿಶ್ಚಿತವೇ ಇರಲಿ. ನೀವೂ ಯುದ್ಧಜೋಡಣೆಯನ್ನು ಕಾಯ್ದುಕೊಂಡಿರ್ರಿ. ಇದುವರೆಗೆ ಹೇಳಿದ ಸಹಾಯ ಸಿಗುವಂತೆ ನಾನೂ ನೋಡಿಕೊಳ್ಳುವೆ."

ಮುಂದೆ ಮಾತು ಚೆನ್ನಬಸವಣ್ಣನ ಮುಂದಿರುವ ಕರಣಹಸಿಗೆಯ ವಿಷಯದ ಕಡೆಗೆ ಹೊರಳಿದವು.

ರುದ್ರಮುನಿಗಳು ನಾಲ್ಕು ದಿನ ಮಾಚಯ್ಯ ಮೊದಲಾದವರೊಂದಿಗೆ ಶಿರುಗಾಡಿ ಮೂಗಬಸವ, ಹುಣಸೀಕಟ್ಟಿ, ತುರಮುರಿ, ಹಿಂಚಲ, ಸಂಪಗಾಂವಿ,

ಮುರರೇಭಾವಿ, ನಂದೀಹಳ್ಳಿ, ಚಿವುಟಗುಂಡಿ ಗ್ರಾಮಗಳಲ್ಲಿಯ ಎಲ್ಲ ಪಾಳಯುಗಳನ್ನು ನೋಡಿಕೊಂಡು ಬಂದರು. ಆಗ ಅಲ್ಲಲ್ಲಿ ಧಾರ್ಮಿಕ ಕರ್ತವ್ಯದರಿವನ್ನೂ ಅದರಿಂದ ಲೋಕಾನುರಾಗ ಉಂಟಾದುದನ್ನೂ ವಿವರಿಸಿ, ಧೈರ್ಯವನ್ನು ಗಣಾಚಾರದ ಯೋಧರಲ್ಲಿ ಮೂಡಿಸಿದರು. ನಾಯಕರ ಸಂದೇಹ ಸಮಸ್ಯೆಗಳಿಗೆ ಪರಿಹಾರ ನೀಡಿದರು. ಹುಣಸೀಕಟ್ಟಿ ಪಾಳಯದ ಹತ್ತಿರ ಅನುಕೂಲ ಸ್ಥಳ ಕಂಡದ್ದರಿಂದ ತಮ್ಮ ಜಪಾನುಷ್ಠಾನಗಳು ಅಲ್ಲಿ ನಡೆಯಬೇಕೆಂದು ನಿರ್ಣಯಿಸಿಕೊಂಡರು. ಇದರಿಂದ ಆ ಭಾಗದಲ್ಲಿಯೂ ಜಾಗ್ರತೆ ಭದ್ರತೆ ಉಂಟಾಗಲು ಸಹಾಯವಾಯಿತು. ಆ ಸ್ಥಳದಲ್ಲಿಯ ರುದ್ರಮುನಿ ಗವಿಯು ಅದಕ್ಕೆ ನಿದರ್ಶನವಾಗಿ ಈಗಲೂ ಉಳಿದಿದೆ.

ಶ್ರಾವಣಮಾಸದ ಗಣಪರ್ವಗಳಿಗೆ ನಾಗಮ್ಮ, ಚೆನ್ನಬಸವಣ್ಣ, ಮಾಚಯ್ಯ ಇವರಿಗೆ ಎಡೆಬಿಡದೆ ಬಿನ್ನಹ ಬರುತ್ತಿದ್ದವು. ಅವರ ಅನುಭಾವದ ವಾಣಿಯನ್ನು ಕೇಳಲು ಆತುರರಾಗಿ ಜನ ಕಾದಿರುತ್ತಿದ್ದರು. ನಾಗಮ್ಮ ಹೋದಲ್ಲೆಲ್ಲ ನಾಡಿನ ಸ್ತ್ರೀಯರು ಧರ್ಮಾಚಾರದಲ್ಲಿ ಹಿಂದುಳಿದುದನ್ನೇ ವಿವೇಚಿಸಿ, ಜಾಗ್ರತೆಗೊಳಿಸಿ ನೀತಿತತ್ವಗಳನ್ನು ಉಪದೇಶಿಸಿ ಅವರ ಮನ ತಣಿಯುವಂತೆ ಮಾಡುತ್ತಿದ್ದಳು. ಅದರಿಂದ ಸ್ಫೂರ್ತಿಗೊಂಡ ಸ್ತ್ರೀಯರು ಪುರುಷರ ಭಕ್ತಿಕ್ರಿಯೆಗಳಿಗೆ ಪೂರಕವಾಗಿ ನಿಲ್ಲುತ್ತಿದ್ದರು. ನಾಗಲಾಂಬೆಯ ಪ್ರಭಾವವು ಆ ಪ್ರದೇಶದಲ್ಲಿ ತುಂಬಾ ಮೂಡಿತು. ಆಕೆಯ ಮುಖ್ಯ ಶಿಬಿರವಿದ್ದ ಸ್ಥಳದಲ್ಲಿ ನಾಗಲಾಪುರ ಎಂಬ ಗ್ರಾಮವಾಗಿ ಅಲ್ಲಿ ನಾಗಲಾಂಬೆಯ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ.* ಆ ಗುಡಿಯ ಹತ್ತಿರ ಚೆನ್ನಬಸವನ ಗುಡಿಯೂ ಇದೆ.

ಶ್ರಾವಣ ಕಳೆದು ಮಳೆ ಕಡಿಮೆಯಾಯಿತು. ಕೊನೆಯ ಸಲ ಬಿಜ್ಜಳನ ಅಳಿಯ ಚಾವುಂಡನು ದೊಡ್ಡ ಸೇನೆಯನ್ನು ಪಡೆದು ಶರಣರನ್ನು ಸದೆಬಡಿ

---

* ಗುಡಿಯಲ್ಲಿಯ ನಾಗಲಾಂಬೆಯ ಮೂರ್ತಿಯು ಎರಡು ಫೂಟು ಎತ್ತರವದೆ. ಅದಕ್ಕೆ ಇಳಿಬಿಟ್ಟ ತಲೆಗೂದಲು ಭುಜದ ಮೇಲೆ ಪಸರಿಸಿವೆ. ಕೊರಳಲ್ಲಿ ಲಿಂಗ, ರುದ್ರಾಕ್ಷಿ ಮಾಲೆಗಳೂ ಕೈಯಲ್ಲಿ ಜಪಮಾಲೆಯೂ ಇದು ಶಿವಯೋಗಿಣಿಯ ಸಲ್ಲಕ್ಷಣವಿದೆ.

ಯಲು ಹೊರಟನು. ಆದರೆ ಕಲಚೂರಿ ಒಡೆತನಕ್ಕೆ ವಿರೋಧಿಗಳಾದ ಮಂಡ ಲಾಧಿಪತಿಗಳು ಸಾಮಂತರಾಜರು ಶರಣರಿಗೆ ಸಹಾಯ ಮಾಡಿ ಚಾವುಂಡ ರಾಯನ ಸೈನ್ಯವನ್ನು ನಾಶಮಾಡಲು ಅತುರರಾಗಿ ಕುಳಿತಿದ್ದರು. ಕಾತರವಳ್ಳಿ (ಕಾದರವಳ್ಳಿ) ಯಲ್ಲಿ ಕಡುತರವಾದ ಕಾಳಗವೆಸಗಿತು. (ಕ್ರಿ. ವ. ೧೧೬೮)

ಈ ಕಾಳಗದಲ್ಲಿ ಮಾಚಯ್ಯ ಕಿನ್ನರಿ ಬೊಮ್ಮಯ್ಯರು ತಮ್ಮ ಯುದ್ಧ ಚಾತುರ್ಯವನ್ನು ತುಂಬಾ ಉಪಯೋಗಿಸಿದರು. ಸಹಾಯಕ ಸೇನಾನಾಯ ಕರೂ ಕಲಿತನದಿಂದ ಕಾದಿದರು. ನಾಗಮ್ಮ, ಎಲ್ಲಿ ಶಕ್ತಿಗುಂದಿದೆ? ಎಲ್ಲಿ ಶಸ್ತ್ರ ಬೇಕು? ಎಲ್ಲಿ ಹಸಿವೆ? ಎಲ್ಲಿ ನೀರು ಬೇಕು? ಎನ್ನುತ್ತ ಅವೆಲ್ಲವನ್ನು ಒದಗಿಸುತ್ತ, ಗಾಯಗೊಂಡವರನ್ನು ಹಿಂದೆ ಸಾಗಿಸುತ್ತ ಮಿಂಚಿನಂತೆ ರಣದಲ್ಲಿ ಸಂಚರಿಸುತ್ತಿದ್ದಳು. ಕಾವಿಯ ಸೀರೆಯ ವೀರಕಾಸೆ-ಖಡ್ಗಗಳನ್ನೂ ಭಸ್ಮ-ರುದ್ರಾಕ್ಷಿಗಳನ್ನೂ ಏಕಕಾಲದಲ್ಲಿ ಧರಿಸಿದ, ಇಳಿಬಿಟ್ಟ ಬಿಳಿಯ ತಲೆಗೂದಲಿನ ಎತ್ತರ ನಿಲುವಿನ ಚಾಪುಗಾಲಿನ ಅರವತ್ತು ವಯದ ನಾಗಮ್ಮನವರನ್ನು, ಆ ಯುದ್ಧದಲ್ಲಿ ಬದುಕಿ ಉಳಿದವರು ತಮ್ಮ ಜೀವಮಾನದಲ್ಲೆಲ್ಲ ಎಳೆಯರಿಗೆ ವರ್ಣಿಸಿ ಹೇಳುತ್ತಿದ್ದರು. ಗಂಗಮ್ಮನು ಹಿಂದಿನ ಕಾಳಗದ ಅನುಭವದ ಹಿನ್ನೆಲೆ ಯಲ್ಲಿ ಹೊಣೆಹೊತ್ತು ನಿಂತಿದ್ದಳು.

ಮೂರು ಮಗ್ಗಲಿನ ಹೊಡೆತ ತಾಳದೆ ಕಲಚೂರ್ಯ ಸೇನೆ ಕಂಗೆಟ್ಟಿತು. ಹಿಂದಕ್ಕೆ ಹೋಗುವ ದಾರಿಗಳೂ ಕಟ್ಟಲ್ಪಟ್ಟಿದ್ದವು. ನಾಶವೊಂದೇ ಹಾದಿ. ಚಾವುಂಡರಾಯನು ಸೋತು ಮಡಿದನು. ಕರ್ಹಾಡದ ತರುಣ ವೀರ ರವಿ ದೇವನ ಖಡ್ಗಪ್ರಹಾರಕ್ಕೆ ಬಲಿಯಾಗಿದ್ದನು. ಅಳಿದುಳಿದವರು ಶಸ್ತ್ರವಿಟ್ಟು ಜೀವದಾನ ಪಡೆದರು. ಹಲವರು ಅತ್ತಿತ್ತ ನುಸುಳಿ ಓಡಿಯೂ ಹೋದರು. ಶರಣದಳಗಳು ಸಮರಾಂಗಣದಿಂದ ಚೆನ್ನಬಸವೇಶ್ವರನನ್ನು ಪಲ್ಲಕ್ಕಿಯನ್ನೇರಿಸಿ ಕೊಂಡು ಬಂದು ತಮ್ಮ ಪಾಳಯಗಳಲ್ಲೆಲ್ಲ ಮೆರವಣಿಗೆ ಮಾಡಿದರು. (ಈ ವಿಜಯೋತ್ಸವದ ಕುರುಹಾಗಿರುವ ಶಿಲೆಯು ಈಗ ಹುಣಸೀಕಟ್ಟಿಯ ಶಾಲೆ ಯಲ್ಲಿದೆ.) ನಾಗಮ್ಮನಿಗೆ ಆಗಂತುಕವಾಗಿ ಆಗಮಿಸಿದ ವೀರಾವೇಶವು ಇಲ್ಲಿಗೆ ಶಮನಗೊಂಡಿತ್ತು.

ಆಮೇಲೆ ಸೋವಿದೇವನು ಶರಣರ ಗೋಜಿಗೆ ಬರುವದನ್ನು ಬಿಟ್ಟು ಬಿಟ್ಟನು. ಅದರೊಡನೆ ರಾಜ್ಯದ ಈ ಭಾಗದ ಆಸೆಯನ್ನೂ ಬಿಟ್ಟನು. ಅಷ್ಟರಲ್ಲಿ ಅವನ ತಂದೆಯ ಕೊಲೆಯ ನಿಜವಾದ ಕಾರಣದ ಸುಳಿವೂ ಅವನಿಗೆ ಹತ್ತಿದ್ದಿತು.

## ೪ ಬೆಳಕು ಅಡಗಿತು

ಉಳಿವೆಯ ವಸಾಹತಿನ, ಅಲ್ಲಿಯ ಮಹಾಮನೆ ಅನುಭವ ಮಂಟಪಗಳ ಕಾರ್ಯಕಲಾಪಗಳ ಉತ್ಸಾಹ ಬಹುದಿವಸ ಉಳಿಯಲಿಲ್ಲ. ಕಲ್ಯಾಣದಲ್ಲಿ ಒಡೆದ ಪ್ರಣತಿಯನ್ನು ಉಳಿವೆಯಲ್ಲಿ ತಂದು ಹೊಂದಿಸಿ ಮತ್ತೆ ಹೊತ್ತಿಸಿದರೂ ಬೆಸುಗೆ ಬಹುದಿವಸ ಬಾಳಲಿಲ್ಲ. ಆದರೆ ಅದು ಆರುವ ಮೊದಲು ಅದರಿಂದ ಹಲವು ದೀಪಗಳು ಹತ್ತಿಕೊಂಡವು. ಚೆನ್ನಬಸವಣ್ಣನ ಅಸಂಖ್ಯಾತ ವಚನಗಳ ಪ್ರತಿಗಳು ನಾಡಿನಲ್ಲಿ ಹೋಗಿದ್ದವು. ಕರಣಹಸಿಗೆ, ಮಂತ್ರಗೋಪ್ಯ, ಪದ ಮಂತ್ರ ಗೋಪ್ಯ, ಸಕೀಲಗಳು ಮುಂತಾದ ಗ್ರಂಥಗಳ ಪ್ರತಿಗಳು ಸಿದ್ಧವಾಗಿದ್ದವು. ನಾಗಮ್ಮನ ಅನುಭವ ಪೂರ್ಣ ವಾಣಿಯಿಂದ ಸಂಗ್ರಹಿಸಿ ಆತನು ರಚಿಸಿದ ಮಿಶ್ರಾರ್ಪಣ ಗ್ರಂಥವು ಮುಗಿಯುತ್ತ ಬಂದಿತ್ತು. ಮಲೆನಾಡ ಹವೆಗೆ ಚೆನ್ನಬಸವಣ್ಣನ ಆರೋಗ್ಯ ಕೆಟ್ಟಿತ್ತು, ಕಿನ್ನರಯ್ಯ ಬಯಲಾದ ಮೇಲೆ ವಸಹಾತಿನ ಬೆನ್ನುಮೂಳೆ ಮುರಿದಂತಾಗಿತ್ತು. ಘೋರಾರಣ್ಯದ ಮಧ್ಯದಲ್ಲಿ ವರ್ಷದಲ್ಲಿ ನಾಲ್ಕುತಿಂಗಳು ರಭಸದಿಂದ ಸುರಿಯು ಮಳೆಯಲ್ಲಿ ಇರಲಾಗದೆ ಹಲವರು ಚದರಿ ಹೋಗುವ ಇಚ್ಛೆ ತಾಳಿದ್ದರು. ಇನ್ನು ತನ್ನ ಮಣಿಹ ಮುಗಿದಂತೆಯೇ ಎಂದು ಭಾವಿಸಿದ ಚೆನ್ನಬಸವಣ್ಣನು ಹೆಚ್ಚುಹೆಚ್ಚಾಗಿ ಅಂತರ್ಮುಖಿಯಾದನು. ಒಂದು ದಿನ ತಮ್ಮ ನಿರಂಜನ ಪೀಠದ ಅಧಿಕಾರವನ್ನು ನಿರ್ವಹಿಸುವಂತೆ ಸಿದ್ಧರಾಮ ಶಿವಯೋಗಿಗಳಿಗೆ ನಿರೂಪಣ ಪತ್ರವನ್ನು ಬರೆದು ಅದನ್ನೂ ಟೊಪ್ಪಿ ಕಮಂಡಲು, ಯೋಗದಂಡಗಳನ್ನೂ ಕರಣಹಸಿಗೆ ಮುಂತಾದ ಗ್ರಂಥಗಳ ಪ್ರತಿಗಳನ್ನೂ ರೇಚಣ್ಣನ ಅಂಕಿತದಲ್ಲಿ ಸಮರ್ಥನಿಷ್ಠರಾದ ಜಂಗಮ ಮೂರ್ತಿಗಳೊಡನೆ ಸೊನ್ನಲಾಪುರಕ್ಕೆ ಕಳುಹಿದನು. ಇಲ್ಲಿಗೆ ಚೆನ್ನಬಸವಣ್ಣನವರ ಜೀವನದ ಧ್ಯೇಯವು ಪೂರೈಸಿದಂತಾಗಿ ಅವರು ಯೋಗನಿರತರಾದರು.

ಕಿನ್ನರಿಬೊಮ್ಮಯ್ಯ ಬಯಲಾದ ಸುದ್ದಿಯನ್ನು ಒಂದೆರಡು ತಿಂಗಳಾದ ಮೇಲೆ ಸಂಚಾರದಲ್ಲಿದ್ದ ರುದ್ರಮುನಿಗಳು ಕೇಳಿ ಉಳಿವೆಗೆ ಬಂದರು. ಪರಸ್ಥಿತಿಯನ್ನು ವಿಶ್ಲೇಷಿಸಿ ನೋಡಿ, ಚೆನ್ನಬಸವಣ್ಣನವರ ಅವತಾರ ಸಮಾಪ್ತಿ ದೂರವಿಲ್ಲೆಂದು

ತಿಳಿದರು. ಧ್ಯಾನಯೋಗದ ಹೊರತು ಚೆನ್ನಬಸವಣ್ಣನವರ ಎಲ್ಲ ಇಂದ್ರಿಯ ಗಳ ಕ್ರಿಯೆಗಳು ನಿಂತುಹೋಗಿದ್ದವು. ಆತ್ಮಜ್ಯೋತಿಯು ಪರಂಜ್ಯೋತಿಯಲ್ಲಿ ಬೆರೆವ ಭರವು ಅವರ ಮುಖದಲ್ಲಿ ತೇಜಃಪುಂಜವಾಗಿ ಸ್ಫುರಿಸುತ್ತಿತ್ತು. ಮಹದ ಬೆಳಗೇ ದರ್ಶನಕೊಟ್ಟಂತಾಗಿ ರುದ್ರಮುನಿಗಳು ಪರವಶತೆಯಿಂದ ವೈಯಿಕ್ಕಿ ವಂದಿಸಿದರು. ನಾಗಮ್ಮ ಸಾಷ್ಟಾಂಗವಾಗಿ ಎರಗಿದಳು. ಶರಣರು ಓಲೈಸಿದರು, ಭಕ್ತರು ಭಜಿಸಿದರು. ಆಗ ನಾಗಮ್ಮನ ಹೃದಯದಲ್ಲಿ ದುಗುಡವೊಂದು ತಲೆ ದೋರಿತು. ಚೆನ್ನಬಸವಣ್ಣ ತನ್ನ ಮಗನೆಂಬ ಮಾಯಾ ಮೊಹದ ವ್ಯಥೆಯೇನೂ ಅದಲ್ಲ. ಅದು ಕೊಂಚವೂ ಇರಲಿಲ್ಲ. ಆತನು ಗುರು, ತಂದೆ ಎಂದೇ ಭಾವಿ ಸಿದ್ದಳು. ಷಟ್‌ಸ್ಥಲಚಕ್ರವರ್ತಿ ಶಿವಯೋಗಿ ಎಂದು ಪೂಜ್ಯನನ್ನಾಗಿ ಕಾಣು ತ್ತಿದ್ದಳು. ಬಸವ, ಚೆನ್ನಬಸವ, ಅಲ್ಲಮಪ್ರಭು ಇವರಿಗೆ ಹಾಗೆಯೇ ಇನ್ನುಳಿದ ಶಿವಶರಣರಿಗೆ ತಾನು ಕರುಣೆಯ ಕೂಸು ಎಂದೇ ಎಂದೆಂದಿಗೂ ಭಾವಿಸಿದ್ದಳು. 'ಸಂಗನಬಸವಣ್ಣನ ಪ್ರಸಾದದಿಂದ ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತು.' 'ಚೆನ್ನಬಸವಣ್ಣನು ಕರುಣಿಸಿದ್ದರಿಂದ ಎನ್ನ ಮನದ ಕಪಟ ಹಿಂಗಿತ್ತು.' 'ಪ್ರಭು ದೇವರ ಶ್ರೀಚರಣದ ಸೇವೆಯಿಂದ ಎನ್ನ ಅಂತರಂಗದ ಸಂದು ಸಂಶಯ ತೊಲ ಗಿತ್ತು' ಎಂದು ಯಾವಾಗಲೂ ಹಾಡುತ್ತಿದ್ದಳು. ಹಾಗಾದರೆ ಈಗಾದ ದುಗು ಡದ ಕಾರಣವೇನು? ಬಸವಣ್ಣ ಸಂಸ್ಥಾಪಿಸಿದ ಶರಣಧರ್ಮ—ಸರ್ವರೂ ಸಮಾನತೆಯಿಂದ ಆತ್ಮೋದ್ಧಾರ ಸಾಧಿಸುವ ಧರ್ಮ—ನಾಡಿನಲ್ಲಿ ಸುಸ್ಥಿರವಾಗಿ ನೆಲೆಗೊಳ್ಳುವದು ತನ್ನ ಜೀವನದ ಗುರಿ. ಅದಾಗದ ಮೊದಲೇ ಚೆನ್ನಬಸವಣ್ಣ ತೊಲಗುವನೆಂಬುದು ಕಾರಣವಾಗಿತ್ತು. ಆಧಾರ ತಪ್ಪಿದ ಬಳ್ಳಿಯಂತೆ, ತಾಯಿ ನಗಲಿದ ಕರುವಿನಂತೆ ಆಗಿತ್ತು ಆಕೆಯ ಅಂತರಂಗದ ಸ್ಥಿತಿ. ಚೆನ್ನಬಸವಣ್ಣ ನವರ ಮುಖದ ಆ ಬೆಳಗು ಮಹಾಬೆಳಗ ಕೂಡಿದಾಗ ಶರಣರು 'ಶಿವಶಿವಾ' ಎಂದು ಉಸಿರುಗರೆದರು. ಭಕ್ತರೆಲ್ಲ ಗೋಗರೆದರು. ಗಿಡಮರಗಳೆಲ್ಲ ಸ್ತಬ್ಧ ವಾಗಿ ಧ್ಯಾನದಲ್ಲಿ ಮುಳುಗಿದಂತಿದ್ದವು. ನಾಗಮ್ಮ,

"ಅಯ್ಯಾ ನಾನದವೆ, ಅಯ್ಯಯ್ಯಾ ಕೈಯ ಕೊಲ ಕೊಂಬರೇ?
ಅಯ್ಯಾ ಎಳೆಗರುವಿನ ಎಳಗಂದಿಯನೆಳೆದೊಯ್ವರೇ ಭಕ್ತರು?
ಅಯ್ಯೋ ಅಯ್ಯೋ ಎನಲೊಯ್ವರೇ
ಬಸವಣ್ಣ ಪ್ರಿಯಚೆನ್ನಸಂಗಯ್ಯಾ?"

ಎಂದು ಬಾಯ್ಬಿಟ್ಟು ಪ್ರಲಾಪಿಸಿದಳು.

ರುದ್ರಮುನಿಗಳ ನೇತೃತ್ವದಲ್ಲಿ ಚೆನ್ನಬಸವಣ್ಣನವರ ಪಾರ್ಥಿವ ಶರೀರಕ್ಕೆ ಸುವಿಧಾನಪೂರ್ವಕವಾಗಿ ಸಮಾಧಿಯಾಯಿತು. (ಕ್ರಿ. ವ. ೧೧೭೦). ಅಲ್ಲಿ ಅವರ ದೇವಸ್ಥಾನ ಉಂಟಾಗಿ ಪ್ರತಿವರ್ಷ ಮಹೋತ್ಸವ ನಡೆಯುತ್ತಿದೆ.

ಮುಂದೆ ಮೂರು ದಿವಸಕ್ಕೆ ಸೊನ್ನಲಾಪುರದಿಂದ ಮರಳಿದ ರೇಚಣ್ಣ ಮೊದಲಾದವರು ತಮ್ಮ ಮಹಾಶಿವಯೋಗಿಯನ್ನು ಕಾಣದೆ ಮರುಗಿದರು.

ಈ ಮೂರು ದಿವಸ ನಾಗಮ್ಮ ಬಹುತರವಾಗಿ ಮೌನವಾಗಿಯೇ ಇದ್ದಳು. ಆಶ್ರಮದಲ್ಲೆಲ್ಲ ಔದಾಸೀನ್ಯವೇ ಆವರಿಸಿತ್ತು. ನಾಗಮ್ಮನಿಗೆ ಲೌಕಿಕದ ಯಾವ ಸೂತ್ರ ತಂತ್ರಗಳೂ ಉಳಿಯಲಿಲ್ಲ. ಸರ್ವಸ್ವತಂತ್ರಳು. ಜೀವನ ಹೇಗೆಂಬ ವಿಚಾರವಂತೂ ಮೊದಲೇ ಇಲ್ಲ. ಶರಣಧರ್ಮದ ಮೇಲಿನ ಶ್ರದ್ಧೆ ನಿಷ್ಠೆ ಇತ್ಯಾದಿ ಭಕ್ತಿಪಾರಮ್ಯದಲ್ಲಿ ತಲೀನಳಾಗಿದ್ದಳು. ಅದರ ಹೊರತು ಬಾಳುವ ಇಲ್ಲವೆ ಬಯಲಾಗುವ ಭಾಗವೇ ಇಲ್ಲ. ಧ್ಯೇಯವೆಂದರೆ ಒಂದೇ, ಧರ್ಮೋದ್ಧಾರ. ಸ್ಮರಣವೆಂದರೆ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ ಇವರ ಆತ್ಯಂತಿಕ ಅಮೃತವಾಣಿ. ಇದ್ದಷ್ಟು ದಿವಸ ಅದನ್ನೇ ಮಾಡುವದು. ಅದಕ್ಕಾಗಿಯೇ ಶ್ರಮಿಸುವವರ ಸಹಕಾರ. ಅದರ ವಿಚಾರವನ್ನೇ ಹೇಳುವದು, ಕೇಳುವದು. ಧ್ಯೇಯದಲ್ಲಿಯೇ ಮನಸ್ಸು ಪೂರ್ಣವಾಗಿ ಎರಕಗೊಂಡಿತ್ತು. ಈ ಧ್ಯೇಯಾಸಕ್ತಿಗಾಗಿಯೇ ಇನ್ನು ಬಾಳುವದು. ಈ ನಿರ್ಧಾರದಿಂದ ಮತ್ತೆ ಮೈದೋರಿತು ಉತ್ಸಾಹ ಅವಳಲ್ಲಿ.

ಆದರೆ ಅನುಭವಮಂಟಪ ಸಂಸ್ಥೆ ಮತ್ತೆ ಒಡೆಯಿತು. ಅನುಭಾವಿಗಳು ಅಲ್ಲಿ ನಿಲ್ಲದಾದರು. ಅವರು ಗ್ರಂಥಭಾಂಡಾರವನ್ನು ಹಂಚಿಕೊಂಡು ತಮ್ಮಿಷ್ಟ ಬಂದಕಡೆಗೆ ಸಾಗಿಹೋದರು. ನಾಡಿನ ಬೇರೆಬೇರೆ ಭಾಗಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ ಲಿಂಗವಂತ ಧರ್ಮಪ್ರಸಾರವನ್ನು ಕೈಕೊಂಡರು. ಕೊನೆಗೆ ಉಳಿದ ಪ್ರಮುಖರೆಂದರೆ ರುದ್ರಮುನಿದೇವರು, ನಾಗಮ್ಮ, ನುಲಿಯಚಂದಯ್ಯ. ರುದ್ರಮುನಿದೇವರು ದೇಶದಲ್ಲಿ ಅಲ್ಲಲ್ಲಿ ಸ್ಥಾಪಿಸಿದ ತಮ್ಮ ಮಠಗಳನ್ನು ನಿರೀಕ್ಷಿಸುತ್ತ ಶ್ರೀಶೈಲದ ಕಡೆಗೆ ಹೋದರು.

# ೭ ಮಹಾಸಾಧನೆಯ ಪ್ರತೀಕ

ಏಳು ವರ್ಷಗಳ ಬಳಿಕ ಒಂದು ಮುಂಜಾವು. ಯೋಗಮಂಟಪದ ಎದುರಿಗೆ ಅಂಗಳದಾಚೆಯ ಗಿಡದ ಕೆಳಗಿನ ಜಗುಲಿಯ ಮೇಲೆ ಕೆಲವು ಯಾತ್ರಿಕರು ಅಮ್ಮನವರ ದರ್ಶನಕ್ಕೆ ಕಾದು ಕುಳಿತಿದ್ದರು. ಶಿವಯೋಗಿಣಿಯ ಮುಂಜಾನೆಯ ಲಿಂಗಾರ್ಚನೆಗೆ ಸೇವೆ ಸಲ್ಲಿಸಿ, ಶರಣೆ ಗೌರಮ್ಮ ಪಾತ್ರೆ-ತಟ್ಟೆ-ಬಟ್ಟೆಗಳನ್ನು ಹಿಡಿದುಕೊಂಡು ಹೊರಗೆ ಬಂದಳು. ಯಾತ್ರಿಕರು ಗಡಬಡಿಸಿ ಮೇಲೆದ್ದರು. ಭಸ್ಮರುದ್ರಾಕ್ಷಿಭೂಷಿತೆಯಾಗಿದ್ದರೂ ಆ ತಾಯಿ ನಡುವಯದವಳಾದ್ದರಿಂದ ಹೌದೋ ಅಲ್ಲವೋ ಎಂದು ಕಕ್ಕಾವಿಕ್ಕಿಯಾಗಿದ್ದರು. ಅದನ್ನು ತಿಳಿದು ಗೌರಮ್ಮ 'ಅಮ್ಮನವರು ಈಗ ಬರುತ್ತಾರೆ, ಕುಳಿತುಕೊಳ್ಳಿರಿ ಅಪ್ಪಗಳೇ' ಎಂದು ಹೇಳಿದಳು. ಯಾತ್ರಿಕರು ಸಮಾಧಾನದಿಂದ ಕುಳಿತರು. ಕೆಲವು ನಿಮಿಷಗಳ ಮೇಲೆ ಭಸ್ಮತ್ರಿಪುಂಢ್ರದಿಂದ ವಿರಾಜಿಸುವ ವಿಶಾಲ ಹಣೆಯ, ಕುಳಿಬಿದ್ದ ಕೆನ್ನೆಗಳ, ಗೂಡುಸೇರಿದ ಕಣ್ಣುಗಳ, ಉದ್ದ ಮೂಗಿನ, ಹೊಳೆಯುವ ಮುಖ, ಕರಗುವದರಲ್ಲಿದ್ದ ವಿರಲವಾದ ಕಿರಿದಾಗಿ ಇಳಿಬಿದ್ದ ಬಿಳಿಯ ಜಡೆ, ಉದ್ದುದ್ದ ಬೆರಳುಗಳ ಕೈಕಾಲು, ಕೊರಳು ತೋಳು ಮುಂಗೈಗಳಲ್ಲಿ ರುದ್ರಾಕ್ಷಿಮಾಲೆ, ಕಾವಿಯ ಸೀರೆ, ಬಡಕಲು ಶರೀರದ ಮೇಲೆತ್ತರಾಳು, ಅಷ್ಟೇ ಉದ್ದಾದ ಕೋಲು ಎಡಗೈಗೆ, ಜಪಮಾಲೆ ಬಲಗೈಗೆ. ಹೀಗೆ ಇರುವ ಮುದುಕಿ ನಾಗಮ್ಮ ಶಿವಯೋಗಿಣಿ ದಪ್ಪವಾದ ಪಾವುಗೆ ಎತ್ತಿ ಎತ್ತಿ ಹೆಜ್ಜೆಹಾಕುತ್ತ ಯೋಗಮಂದಿರದ ಒಳಗಡೆಯಿಂದ ಹೊರಗೆ ಬಂದಳು. ಯಾತ್ರಿಕರು ಅಂಗಳದಲ್ಲಿ ಸಾಲಾಗಿ ಸಾಷ್ಟಾಂಗವಾಗಿ ಎರಗಿದರು.

"ಶಿವನಿಗೆ ಶಿವನಿಗೆ ಶಿವಶರಣು. ಏಳಿ ಅಪ್ಪಗಳಿರಾ ಏಳಿರಿ. ಯಾವೂರ್ರಪಾ? ಎಲ್ಲಿಂದ ಬಂದುದು?" ಎಂದು ಕೈಯೆತ್ತಿ ಹರಸುತ್ತ ಕೇಳಿದಳು. ಹಿರಿಯನೊಬ್ಬ ಹೇಳಿದ :

"ನಮ್ಮದು ಮಗಳೂರು ಅಮ್ಮಾ! ಪಂಪಾಪತಿಯ ದರ್ಶನಕ್ಕೆ ಹೊರಟಿದ್ದೇವೆ. ಈ ಪಾದದರ್ಶನ ಪಡೆದು ಹೋಗಲೆಂದು ಇತ್ತ ಬಂದೆವು."

"ಒಳಿತಾಯಿತು ಅಪ್ಪಾ, ಪಂಪಾಪತಿಯು ಹಂಬಲ ಮನದಲ್ಲಿ, ಹಂಪಿಯು ಮಾರ್ಗಕ್ರಮಣದ ಬಲ ಮೈಯಲ್ಲಿ! ನೀವು ಬಂದುದು ವಿರೂಪಾಕ್ಷನೇ ಬಂದಂತೆ. ನನ್ನ ಪುಣ್ಯ! ಇಲ್ಲಿ ಇರ್ರೈಪಾ ಎರಡು ದಿನ......ಗೌರಕ್ಕ, ಶಂಕರಣ್ಣನನ್ನು ಕರೆ ಇವರ ಸಾಮಾನು ಇಡಿಸಿ ಸ್ನಾನ ಮಾಡಿಸಿಕೊಂಡು ಬರಲಿ."

ಹೀಗೆ ಹೇಳುತ್ತ ಅಮ್ಮ ದಾಸೋಹ ಮಠದ ಕಡೆಗೆ ನಡೆದಳು. ಶಂಕರಣ್ಣ ಬಂದು ಯಾತ್ರಿಕರನ್ನು ಕರೆದುಕೊಂಡು ಹೋದನು. ಶಿವಯೋಗಿಣಿ ಮಠದ ಬಾಗಿಲ ಮುಂದಿನ ಮೆಟ್ಟಿಲುಗಳನ್ನು ಗೌರಮ್ಮನ ಆಸರ ಹಿಡಿದು ಹತ್ತಿ ಹೋಗಿ ಕಟ್ಟಿಯಮೇಲೆ ಕುಳಿತಳು. ನಿತ್ಯದಂತೆ ಅಲ್ಲಿಯ ಕ್ರಿಯೆಗಳನ್ನು ನಿರೀಕ್ಷಿಸ ಹತ್ತಿದಳು.

ಮುಂದೊಂದುದಿನ ಮುಂಜಾನೆ ಚಂದಯ್ಯ ಆಶ್ರಮದಿಂದ ಸ್ವಲ್ಪ ದೂರ ನದೀ ತೀರದಲ್ಲಿ ತನ್ನ ಕಾಯಕದ ಹುಲ್ಲುಕೊಯ್ಯುತ್ತಿದ್ದನು. ದಿನ್ನೆಯಮೇಲಿನ ದಾರಿಯಲ್ಲಿ ಇಬ್ಬರು ಸ್ವಾಮಿಗಳು ಬರುವದು ಕಾಣಿಸಿತು. ಆದರೂ ಕಾಯಕದಲ್ಲಿ ಕಡುನಿಷ್ಠ ಚಂದಯ್ಯ ಯಾರುಯಾರೊ ಬರುತ್ತಾರೆ, ಹೋಗುತ್ತಾರೆ ಎನ್ನುತ್ತ ತಲೆತಗ್ಗಿಸಿ ಕ್ರಿಯಾನಿರತನಾಗಿದ್ದನು. ಅವರು ದಿನ್ನೆ ಇಳಿದು ಗಿಡಮರಗಳ ನಡುವಿನ ತಿರುವುಮುರುವಿನ ದಾರಿಗುಂಟ ನದಿಯ ಒಡಲಿಗೆ ಬರುವಾಗ ಅವರ ಮಾತುಗಳು ಚಂದಯ್ಯನಿಗೆ ಕೇಳಹತ್ತಿದವು. ಒಂದು ದನಿ ಪರಿಚಿತ; ಇನ್ನೊಂದು ಹಿಂದೆ ಕೇಳಿದಂತಿದೆ, ಅದೂ ಗೊತ್ತಾಯಿತು; ಒಬ್ಬರು ಸಿದ್ಧವೀರ ಸ್ವಾಮಿ, ಇನ್ನೊಬ್ಬರು ರುದ್ರಮುನಿದೇವರು. ಬಹುದಿವಸಕ್ಕೆ ಬಂದರು. ಮಾತು ತನ್ನ ಅಮ್ಮನವರ ವಿಷಯವಾಗಿತ್ತು. ಎದೆತುಂಬಿ ಬಂದಿತು. ಅವರಿನ್ನೂ ಸ್ವಲ್ಪ ದೂರ ಇದ್ದಾರೆ. ಅತ್ತ ಕಿವಿಗೊಟ್ಟು, ಇತ್ತ ಕೈ ಅವಸರವಾಗಿಸಿದ.

ತಮಗಿಷ್ಟವೆನಿಸಿದ ರೀತಿಯಲ್ಲಿ ವೀರಶೈವೋದ್ಧರಣ ಕಾರ್ಯ ನೆರವೇರಿಸುವದಕ್ಕೆ ಸಂಚರಿಸುತ್ತಿದ್ದ ರುದ್ರಮುನಿದೇವರು ನಾಗಮ್ಮನವರ ದರ್ಶನಾಕಾಂಕ್ಷಿಗಳಾಗಿ ನಿನ್ನೆ ಮಹೇಶ್ವರ ಹಳ್ಳಿಗೆ ಬಂದಿದ್ದರು. ಬೆಳಗಿನ ಲಿಂಗಾರ್ಚನೆ ನೆರವೇರಿಸಿಕೊಂಡು ಇಬ್ಬರೂ ಸ್ವಾಮಿಗಳು ಪಾದಚಾರಿಗಳಾಗಿ ಅಮ್ಮನ ಆಶ್ರಮಕ್ಕೆ ಹೊರಟಿದ್ದರು. ಅವರ ಮಾತು ಅಮ್ಮನವರ ವಿಷಯಕ್ಕೆ ಹೊರಳಿದ್ದವು. ಸಿದ್ಧವೀರದೇವರ ಮಾತು :

"ಇಲ್ಲಿ ಅವರ ಪ್ರಭಾವ ತುಂಬ ಹರಡಿದೆ. ನಿತ್ಯವೂ ಅವರ ದರ್ಶನಕ್ಕೆ ಬರುವ ಹೊಸ ಜನರು ಇದ್ದೇ ಇರುತ್ತಾರೆ. ಅನುಭಾವಿಗಳು ಶಿವಯೋಗ ಸಾಧಕರು ಬರುತ್ತಾರೆ. ಎಲ್ಲರ ಆತ್ಮತೃಷೆಗೂ ತೃಪ್ತಿದಾಯಕ ಅಮ್ಮನ ಮಾತು. ಎಂತಹ ತಪಸ್ವಿನಿ! ಎಂತಹ ಸಾಧಕಳು! ಈ ಶಿವಯೋಗಿಣಿ ಮಹಾಸಾಧನೆಯ ಒಂದು ಪ್ರತೀಕ."

"ಹೌದು ಇವರ ವೃತ್ತಿಯೇ ತತ್ವಸಾಧನೆಯಾಗಿತ್ತು. ನಿತ್ಯ ಸತ್ಯತತ್ವಗಳಿಗೆ ತೊತ್ತಾಗಿ, ತತ್ವವೇತ್ತರಿಗೆ ತೊತ್ತಾಗಿ ಜನ್ಮಾರಭ್ಯ ಕೈಕೊಂಡ ಇವರ ಕಾಯಕವೇ ತಪ. ಇನ್ನೇ ಇವರು ಕ್ರಿಯಾ-ಜ್ಞಾನಗಳ ಸಮನ್ವಯದ ಸಾಧನ ಮಾಡಿಕೊಂಡರು. ಇವರ ಜ್ಞಾನ-ಕ್ರಿಯೆಗಳನ್ನು ವಿಂಗಡಿಸಿ ತಿಳಿಯುವದೇ ಸಾಧ್ಯವಿರಲಿಲ್ಲ. ಆ ಸ್ವರೂಪವೇ ಶಿವಶಕ್ತಿಯರ ಸಾಮರಸ್ಯವನ್ನು ನೀಡಿದೆ. ಶಿವಪೂಜೆ ಯೋಗಾಭ್ಯಾಸಗಳೂ ಅದರಲ್ಲಿಯೇ ಅಡಕವಾಗಿದ್ದವು."

"ಅಲ್ಲವೇ? ಅಮ್ಮನ ಚರಿತ್ರ ಕೇಳಿದರೆ ಕೌತುಕವಾಗುತ್ತದೆ."

"ನಿಜ ನಿಜ. ಕೌತುಕದಲ್ಲಿ ಕೌತುಕವಾಗಿದೆ ನಾಗಮ್ಮನವರ ಉಜ್ವಲ ಚರಿತ್ರೆ. ಬಸವಣ್ಣನವರ ಚರಿತ್ರೆಯಲ್ಲಿ ನಾಗಮ್ಮನವರ ಪಾತ್ರ ಅತಿ ಮಹತ್ವದ್ದು. ಬಸವಣ್ಣನವರ ಸರ್ವಸಾಧನೆಗೆ, ಸರ್ವಕಾರ್ಯ ತತ್ಪರತೆಗೆ ಇವರು ಹಿನ್ನೆಲೆಯ ಶಕ್ತಿಯಾಗಿದ್ದರು. ಬಸವಣ್ಣನವರ ವ್ಯಕ್ತಿತ್ವವನ್ನು ರೂಪಿಸಿದ ಶ್ರೇಯಸ್ಸಿನಲ್ಲಿ ಬಹುಭಾಗ ಈಕೆಯದು. ಈ ಶರಣೆ ಅನುಭವಮಂಟಪ ಮಹಮನೆಗಳ ಧುರೀಣೆಯಾಗಿದ್ದಳು. ಜಟಿಲ ಸಮಸ್ಯೆಗಳಲ್ಲಿ ಮಾರ್ಗದರ್ಶಿನಿಯಾಗಿದ್ದಳು. ಶರಣ ಸಮುದಾಯದ ಆಪತ್ಕಾಲದಲ್ಲಿ ಧೈರ್ಯದ ಬೆಳಕಾಗಿದ್ದಳು. ರಣರಂಗದಲ್ಲಿ ಪ್ರೋತ್ಸಾಹಕಳಾಗಿದ್ದಳು. ವೃದ್ಧಾಪ್ಯದಲ್ಲಿ ಉಳಿವೆಯ ವಸಹಾತಿನ ಸ್ಥಾಪನೆಯಲ್ಲಿ ಮುಖ್ಯಳೇ ಆಗಿದ್ದಳು. ಇದನ್ನು ನೀವೂ ಬಲ್ಲಿರಿ. ಅಲ್ಲಿ ಎಲ್ಲರೂ ಅಗಲಿದ ಮೇಲೆಯೂ ಧೃತಿಗೆಡದೆ ತನ್ನ ಗುರಿಯಾದ ಧರ್ಮೋನ್ನತಿಯ ಕಾರ್ಯವನ್ನು ಜೀವಾಂತ್ಯದವರೆಗೂ ನಡಿಸುವ ನಿಶ್ಚಯ ಮಾಡಿ ಹೊರಟು ಇಲ್ಲಿ ಬಂದಿದ್ದಾಳೆ......"

ಬಂಡೆಯನ್ನೇರಿ ಹಾದಿಯ ಮೇಲೆ ಹುಲ್ಲುಹೊರೆಯನ್ನಿಟ್ಟುಕೊಂಡು ನಿಂತಿದ್ದ ಚಂದಯ್ಯ 'ಶರಣು ಶರಣು, ಗುರುಗಳಿಗೆ ಶರಣು ಶರಣು' ಎನ್ನುತ್ತ

ಇಬ್ಬರ ಪಾದಕ್ಕೂ ಎರಗಿದನು. ರುದ್ರಮುನಿ ನೋಡಿದರು ಅವನನ್ನು, ಹೊರೆಯನ್ನು.

"ಭಲೆ ಕಾಯಕದ ಕೈಲಾಸಪತಿ ಚಂದಯ್ಯನವರು"

ಎನ್ನುತ್ತ ತಲೆಹಿಡಿದೆತ್ತಿ ಆಲಿಂಗಿಸಿದರು.

ಈಶ್ವರನ ಮುಂದಿನ ನಂದಿಯಂತೆ ಅಮ್ಮನವರ ಮುಂದಿನ ಚಂದಯ್ಯನ ದರ್ಶನ ಅಮ್ಮನವರ ದರ್ಶನಕ್ಕೆ ನಾಂದಿ" ಎಂದು ನಲಿದು ನುಡಿದರು ಸಿದ್ಧವೀರದೇವರು.

ಹೊರೆಹೊತ್ತು ಚಂದಯ್ಯ 'ಬನ್ನಿ' ಎಂದು ಮುಂದಾದನು. ತನ್ನ ಕುಟೀರದ ಮುಂದೆ ಹೊರೆ ಇಟ್ಟು, ಯೋಗಮಂಟಪದ ಆಸನದಲ್ಲಿ ಗುರುದ್ವಯರನ್ನು ಕೂಡ್ರಿಸಿ ದಾಸೋಹ ಮಠಕ್ಕೆ ಓಡಿದನು.

ಚಂದಯ್ಯನ ಹೆಗಲ ಮೇಲೆ ಕೈಯಿಟ್ಟು, ಕೈಯ್ಯ ಕೋಲನ್ನು ಮುಂದೆ ಮುಂದೆ ಚಾಚಿ ಊರುತ್ತ ದೊಡ್ಡದೊಡ್ಡ ಹೆಜ್ಜೆಹಾಕುತ್ತ ಅವಸರದಿಂದ ಅಮ್ಮ ಬಂದಳು. ಪಾದರಸವು ಪಾದರಸದಿಂದ ಆಕರ್ಷಿಸಲ್ಪಟ್ಟಂತಾಗಿತ್ತು. ತೇಗುತ್ತ ಬಾಗಿಲಿಗೆ ಬರಲು ಸ್ವಾಮಿಗಳು ಎದ್ದುನಿಂತರು. ಆಕೆ ಕೋಲು ಚೆಲ್ಲಿ 'ಶರಣು, ಶರಣು, ಶಿವಶರಣು' ಎನ್ನುತ್ತ ಅವರ ಪಾದಕ್ಕೆ ತಲೆಹಚ್ಚಿ ನಮಿಸಲು ಬಾಗುತ್ತಿರುವಾಗ ಅವರು ತಡೆದು ಎಡಬಲದಲ್ಲಿ ತೋಳು ಹಿಡಿದು ಪೀಠದ ಮೇಲೆ ಕೂಡ್ರಿಸಹೋದರು. ಆದರೆ ಅಮ್ಮ ಕುಸಿದು ಕೆಳಗೇ ಕುಳಿತಳು.

ಆನಂದಾಶಯದ ಮಾತು ನಡೆದು ಮುಂದೆ ರುದ್ರಮುನಿಗಳು ತಮ್ಮ ಕೈಕೊಂಡ ಸಂಚಾರದ ವಿವರಗಳನ್ನು ತಿಳಿಸಿದರು. ಶರಣಧರ್ಮ ಪ್ರಚಾರ ನಡೆದ ವಿಷಯದಲ್ಲಿ ಹೀಗೆ ಹೇಳಿದರು :

"ಮೊದಲು ಕಲ್ಯಾಣದಿಂದ ಬಳಿಕ ಕುರಗೋಡಿನಿಂದ, ಉಳಿವೆಯಿಂದ ಹರಿಡಿಹೋದ ಶರಣರು ಜಂಗಮಮೂರ್ತಿಗಳು ನಾಡಿನ ಮೂಲೆಮೂಲೆಗೂ ಬಸವಸಂದೇಶವನ್ನು ತಲುಪಿಸುತ್ತಿದ್ದಾರೆ. ಪ್ರಮಥರ ಮಹಿಮೆಯನ್ನು ಹಾಡು ಕಟ್ಟಿ ಹಾಡುತ್ತಿದ್ದಾರೆ. ವಚನಗಳ ಪ್ರತಿಮಾಡಿ ಕಳಿಸುತ್ತಿದ್ದಾರೆ. ಪಂಡಿತರು ಮತ್ತೆ ಬರೆಯುತ್ತಲೂ ಇದ್ದಾರೆ. ವೀರಶೈವ ಮತಾನುಯಾಯಿಗಳು ಸಾಕಷ್ಟು ಇರುವ ಪ್ರತಿಯೊಂದು ಹಳ್ಳಿಗೂ ಒಂದು ಮಠವಾಗಿದೆ. ಕ್ರಿಯಾಮೂರ್ತಿ

ಯಾಗಿ ಒಬ್ಬ ಸ್ವಾಮಿ ಅಲ್ಲಿ ನಿಂತಿದ್ದಾರೆ. ಭಕ್ತರ ಧಾರ್ಮಿಕ ಕಾರ್ಯಕರ್ತರು ಗಳಾಗಿ ಮಠಪತಿ, ಗಣಾಚಾರಿ, ಸಾರುಮಯ್ಯ ಮುಂತಾದವರ ಯೋಜನೆ ಯಾಗಿದೆ. ಮಹತ್ವದ ಸ್ಥಳಗಳಲ್ಲಿ ದಾಸೋಹದ ಮಠಗಳಾಗಿವೆ. ಭಕ್ತರು ಕಾಯಕ ಭಾವನೆಯಿಂದ ಕೃಷಿಕೈಗಾರಿಕೆಗಳಲ್ಲಿ ಉತ್ಸಾಹಿತರಾಗಿ ಮುಂದುವರಿ ಯುತ್ತಿದ್ದಾರೆ. ಅಮ್ಮನವರೆ, ಪ್ರಮಥರಿಂದ ಪರಿಪೂರ್ಣತೆಗೊಂಡ ವೀರಶೈವ ಧರ್ಮ ಈಗ ವ್ಯಕ್ತಿಯದಲ್ಲ, ಕುಟುಂಬ ಮಾತ್ರದ್ದಲ್ಲ, ಸಾಮಾಜಿಕ ಧರ್ಮವಾಗಿ ಬೇರೂರುತ್ತಲಿದೆ. ಬಸವಣ್ಣನವರನ್ನು ಸಲಹಿದ ನಿಮ್ಮ ಹಸ್ತಗುಣ! ಚೆನ್ನಬಸ ವಣ್ಣನವರನ್ನು ಹೆತ್ತ ನಿಮ್ಮ ಉದರ ಮಹಿಮೆ! ಅವ್ವಾ ನಿಮ್ಮ ಜೀವನ ಸಾರ್ಥಕ......" ಎನ್ನುತ್ತ ಎದೆದುಂಬಿ ಕೈಮುಗಿದರು.

"ಶಿವನ ಹಸ್ತ, ಶಿವನ ವಾಣಿ, ಬಸವಣ್ಣ ಪ್ರಿಯ ಚೆನ್ನಸಂಗಯ್ಯ ನೀವಾಗಿ ಮಾಡಿದ್ದಲ್ಲದೆ ಬೇರೆ ಆದುದುಂಟೇ ಗುರುವೇ?" ಮುಖವೆತ್ತಿ ಕೈಮುಗಿದಳು.

"ಧನ್ಯೆ, ಧನ್ಯೆ" ಎಂದರು ಸಿದ್ಧವೀರದೇವರು.

ಬಳಿಕ ರುದ್ರಮುನಿಗಳು ಅಮ್ಮನವರಿಗೆ ಗೊತ್ತಿದ್ದ ಮಹಾನುಭಾವಿಗಳು, ಶರಣರು ಯಾರುಯಾರು ಎಲ್ಲಿದ್ದಾರೆ? ಯಾರು ಬಯಲಾಗಿದ್ದಾರೆ ಎಂಬದನ್ನು ತಮಗೆ ಗೊತ್ತಿದ್ದಷ್ಟು ಹೇಳಿದರು. ಮಧ್ಯಾಹ್ನದ ಸ್ನಾನಶಿವಾರ್ಚನೆಗಳು ನಡೆ ದವು. ಅಂದು ನಾಗಮ್ಮ ಸಂಭ್ರಮದಿಂದ ಗುರುಲಿಂಗಜಂಗಮದ ಪಾದೋದಕ ಪ್ರಸಾದ ಪಡೆದು ಪರಮಾನಂದಭರಿತಳಾದಳು. ಆ ಶರಣೆ ಬಾಹ್ಯ ಪ್ರಜ್ಞೆಯಿಂದ ವೀರಶೈವ ಪ್ರಕ್ರಿಯೆ ನಡಿಸುತ್ತಿರುವದು ಬಹುಶಃ ಇದೇ ಕೊನೆಯದಾಯಿತು. ಶ್ರೀಗಳಿಬ್ಬರೂ ಅಂದು ಸಾಯಂಕಾಲ ಮಹೇಶ್ವರ ಹಳ್ಳಿಗೆ ಮರಳಿದರು.

ಇಲ್ಲಿಗೆ ನಾಗಮ್ಮನ ಧ್ಯೇಯ ಪೂರೈಸಿದಂತಾಗಿತ್ತು. ಮಣಿಹ ಮುಗಿದಂತಾ ಗಿತ್ತು. ಸಫಲ ಕ್ರಿಯೆಯ ಪರಿಣಾಮವನ್ನು ಪರಶಿವನಿಗೆ ಅರ್ಪಿಸಿ ಆ ಆನಂದ ದಲ್ಲಿ ಬೆರೆದು ತನ್ನನ್ನು ತಾನು ಮರೆತು ಬಿಟ್ಟಳು. ಬರಬರುತ್ತ ವ್ಯಾವಹಾರಿಕ ಅರಿವು ಅರಗಿಹೋಯಿತು. ವೃತ್ತಿ ಅಂತರ್ಮುಖವಾಯಿತು. ಮಾತು, ಕೃತಿ, ನಗೆ, ಕರಚರಣಗಳ ಚಲನ ಇವೆಲ್ಲ ಹೊರಗಿನ ಸಂಗತಿಗಳಿಗೆ ಸಂಬಂಧಿಸಿರಲೇ ಇಲ್ಲ. ಎಲ್ಲರನ್ನೂ ಶಿವ, ಬಸವ, ಎಂದೇ ಸಂಬೋಧಿಸುವಳು. ಹೀಗೆ ಲೀಲಾ ಮಯವಾಗಿಯೂ ಕೆಲವು ತಿಂಗಳು ಬದುಕಿದ್ದಳು. ಗೌರಮ್ಮ, ಗಿರಿಯಮ್ಮ,

ಚಂದ್ರಮ್ಮ, ಮುತ್ತಬ್ಬೆ ಶರಣೆಯರು ಆ ಶಿವಯೋಗಿಣಿಯ ಜೋಪಾನ ಮಾಡುತ್ತಿದ್ದರು. ಪೂಜಾದಿಗಳನ್ನು ಮಾಡಿಸುತ್ತಿದ್ದರು. ಕರಣಗಳಡಗಿದ ದೇಹ ಉಳಿಯುವದೆಷ್ಟು ದಿನ ? ಒಮ್ಮೆ ಮಹಾ ಶಿವಯೋಗಿಣಿಯು ಆ ಬಯಲಭಾವ ಸೀಮಾತೀತವಾದ ಬಯಲಲ್ಲಿ ಬೆರೆಯಿತು. (ಕ್ರಿ. ಶ. ಸುಮಾರು ೧೧೬೦).

ಸಿದ್ಧವೀರ ದೇಶಿಕರ ನೇತೃತ್ವದಲ್ಲಿ ಆ ಶರೀರಕ್ಕೆ ಸಮಾಧಿಯಾಯಿತು. ಅದನ್ನು ಈಗಲೂ ಅಲ್ಲಿ ಕಾಣಬಹುದು. ಆ ಆಶ್ರಮ-ದಾಸೋಹಮಠಗಳು ಕಾಲಗರ್ಭದಲ್ಲಿ ಕರಗಿ ಹೋಗಿವೆ. ಚಂದಯ್ಯ ಅಲ್ಲಿಂದ ಪಳೆಂಟುಮೈಲು ದೂರವಾಗಿದ್ದ ನಂದೀಹಳ್ಳಿ*ಯಲ್ಲಿ ಕೆಲವು ದಿವಸ ಇದ್ದು ಬಯಲಾದನೆಂದು ಹೇಳುತ್ತಾರೆ.

ಅಕ್ಕನಾಗಮ್ಮನ ದಿವ್ಯಜೀವನ ಮುಕ್ತಾಯವಾಯಿತು. ಕ್ರಾಂತಿದೂತರು ಹುಟ್ಟುವ ಮೊದಲೇ ಹುಟ್ಟಿ, ಕ್ರಾಂತಿ ಕೈಗೂಡಿ ಕೊನೆಗೊಂಡ ಮೇಲೆಯೂ ಬಾಳಿ, ಕ್ರಿಯಾಸಿದ್ಧಿಯ ಮಹದಾನಂದದಲ್ಲಿ ಬೆರೆದ ಅಕ್ಕನಾಗಮ್ಮನ ಹೆಸರು ಚಿರಸ್ಥಾಯಿಯಾಗಿದೆ.

---

* ಶರಣರು ಪಾಳಯಬಿಟ್ಟಿದ್ದ ಸಂಪಗಾಂವಿಯ ಹತ್ತಿರದ ನಂದೀಹಳ್ಳಿ ಬೇರೆ.

# ಒಪ್ಪೋಲೆ

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೧೬ | ೨೧ | ಇಕೆ | ಈಕೆ |
| ೨೪ | ೧೧ | ಮಾಗ | ಮಾರ್ಗ |
| ೩೭ | ೧೩ | ಪಡಿಗಳನ್ನು | ಪಡಿಗಗಳನ್ನು |
| ೩೯ | ೨೫ | ಕೊಳಿ | ಕೋಳಿ |
| ೪೧ | ೯ | ಅಧಿಕಾರಿಯಾದನೆಂಬ | ಅಧಿಕಾರಿಯಾದಾನೆಂಬ |
| ೫೯ | ೧ | ಆದಂತೆ | ಆದಂತೆ |
| ೬೩ | ೧೪ | ಬಸವಣನು | ಬಸವಣ್ಣನು |
| ೬೪ | ೧೫ | ಅದರೋಡನೆ | ಅದರೊಡನೆ |
| ೬೭ | ೫ | ಧವುಶ್ರೀ | ಧರ್ಮದರ್ಶಿ |
| ೬೮ | ೧೦ | ಜೋಡೆಸಿ | ಜೋಡಿಸಿ |
| ೭೦ | ೬ | ಚಟುವಚಿಕೆ | ಚಟುವಟಿಕೆಯು |
| ೭೩ | ೧೬ | ವಿರವ್ರ | ವೀರವ್ರತಿ |
| ೭೭ | ೧೬ | ಪ್ರಂಶಸಿಸಿದರು | ಪ್ರಶಂಶಿಸಿದರು |
| ೭೮ | ೪ | ವೂವರ | ಮೂವರ |
| ೮೦ | ೧೭ | ಬರಮಾಡಿಕೊಂಳು | ಬರಮಾಡಿಕೊಂಡಳು |
| ೮೨ | ೧ | ಬಸವೆಶಾ | ಬಸವೇಶಾ |
| ೮೨ | ೧೭ | ಸಾಮೀ | ಸ್ವಾಮೀ |
| ೮೩ | ೨೬ | ನ್ನ | ನಿನ್ನ |
| ೮೮ | ೧ | ಬಿಡವಿರು | ಬಿಡದಿರು |
| ೯೭ | ೨೦ | ದ್ವೇಶಕ್ಕೆ | ದ್ವೇಷಕ್ಕೆ |
| ೧೧೬ | ೩ | ಶ್ರದ್ಧಾಚರಣೆ | ಶುದ್ಧಾಚರಣೆ |
| ೧೧೮ | ೨೦ | ಕಾರಣ | ಕಂಕಣ |
| ೧೨೩ | ೧೬ | ಸೊಲಿಸಿ | ಸೋಲಿಸಿ |
| ೧೨೪ | ೨೩ | ದೊಡ್ಡದಾಗಿರುವದರಿಂದ | ದೊಡ್ಡದಾಗಿಡುವದರಿಂದ |
| ೧೨೭ | ೧ | ನಮ್ಮನ್ನು | ನಿಮ್ಮನ್ನು |
| ೧೩೨ | ೧ | ಮುರರೇಭಾವಿ | ಮುರಕೀಭಾವಿ |
| ೧೩೨ | ೨೪ | ಇದು | ಇದ್ದು |

| | | | |
|---|---|---|---|
| ೧೪೩ | ೭ | ಜಗದಜ್ಜಿ | ಜಗದಬ್ಬೆ |
| ೧೫೨ | ೧೩ | ಸುರಿಯು | ಸುರಿಯುವ |
| ೧೫೩ | ೭ | ಮೂಹದ | ಮೋಹದ |
| ೧೫೩ | ೨೪ | ಕೊಲ | ಕೋಲ |
| ೧೫೩ | ೨೫ | ...ಒಯ್ವರೇ ಭಕ್ತರು? | ...ಒಯ್ವರೇ? ಭಕ್ತರು |
| ೧೫೪ | ೧೧ | ತಲೀನ | ತಲ್ಲೀನ |
| ೧೫೪ | ೧೨ | ಭಾಗ | ಭಾವ |
| ೧೫೪ | ೧೫ | ಸಹಕಾರ | ಸಹವಾಸ |
| ೧೫೫ | ೪ | ತುಂಗಭದ್ರಾ | ತುಂಗಾ, ಭದ್ರಾ |
| ೧೫೫ | ೧೫ | ಲಿಂಗ | ಅಂಗ |
| ೧೬೦ | ೧೫ | ಕುಧಿಯಲ್ಲಿಲ್ಲದೆ | ಕುದಿಯಲಲ್ಲದೆ |
| ೧೬೩ | ೪ | ದರ್ಶಿನಕ್ಕೆ | ದರ್ಶನಕ್ಕೆ |
| ೧೬೫ | ೨೦ | ವೃದ್ಧಾಷ್ಯ | ವೃದ್ಧಾಪ್ಯ |
| ೧೬೫ | ೨೫ | ಬಂಡೆ | ಒಂಡೆ |

# ಶ್ರೀ ಶಿರಹಟ್ಟಿಯವರ ಇತರ ಕೃತಿಗಳು

೧ ಚಿತ್ತೂರಿನ ಪುನರುದ್ಧಾರ
(ಐತಿಹಾಸಿಕ ಕಥೆ)

೨ ಕನ್ನಡಿಗನ ಕಲಿತನ
(ಐತಿಹಾಸಿಕ ನಾಟಕ)

೩ ನೀತಿಮುಕ್ತಾವಲಿ
(ಖಂಡಕಾವ್ಯ)

೪ ಸಿದ್ಧರಾಮೇಶ್ವರ ಚರಿತ್ರ
(ವಿಜಾಪುರ ಶ್ರೀ ಸಿದ್ಧೇಶ್ವರ ಸಂಸ್ಥೆಯಿಂದ ಪ್ರಕಾ...)

೫ ಯೋಗಿರಾಜ ವಿಜಯ
(ಹಾಲಕೆರೆಯ ವಿರಕ್ತ ಮಠದಿಂದ ಪ್ರಕಾಶಿತ)

೬ ನೂರೊಂದು ನೆಲೆಯ ನಿಲವು
(ಷಟ್‌ಸ್ಥಲ ತತ್ವ ಕಾವ್ಯ; ಹರಳೇಶ್ವರಾಶ್ರಮದಿಂದ ಪ್ರಕಾಶಿ...)

೭ ಬಯಲಾದ ಸಂಚು
(ಐತಿಹಾಸಿಕ ಕಥೆ; ಅರವಿಂದ ಗ್ರಂಥಾಲಯ ಚಡಚಣ ...
ರಿಂದ ಪ್ರಕಾಶಿತ)

೮ ಬಸವರಾಜದೇವರು
(ಬಸವನ ಬಾಗೇವಾಡಿಯ ಬಸವೇಶ್ವರ ಲಿಂ. ಜಾ. ಸಂಸ್ಥೆ ಅವ
ರಿಂದ ಪ್ರಕಾಶಿತ)